ವಿತ್ತೀಯ ಕಾರ್ಯಕಲಾಪಗಳು

1987-88ರ ಪೂರಕ ಅಂದಾಜುಗಳ ಮೊದಲನೆಯ ಕಂತಿನ ಮೇಲಿನ ಚರ್ಚೆ

ಶ್ರೀ ಎಂ. ರಘುಪತಿ (ಮಾನ್ಯ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ೧೯೮೮ರ ಮಾರ್ಚ್ ತಿಂಗಳ ಅಂತ್ಯದೊಳಗೆ ಭೂಸಾರ ಸಂರಕ್ಷಣೆ ಮತ್ತು ವ್ಯವಸಾಯ, ತೋಟಗಾರಿಕೆ ಹೊರತು ಪಡಿಸಿ ಸಂಬಂಧಪಟ್ಟ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬಂದಿರುವ ರಾಜ್ಯದ ಲೆಕ್ಕದಲ್ಲಿ ಳ.೨೧,೦೦,೦೮೩ ರೂಪಾಯಿಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ ೨ ಕೋಟಿ ೫ ಲಕ್ಷ ೧೦ ಸಾವಿರ ರೂಪಾಯಿಗಳಿಗೂ ಮಿಗಾದ ಇನ್ನೂ ಹೆಚ್ಚಿನ ಮೊಬಲಗಳನ್ನು ಸರ್ಕಾರ ಮಂಜೂರು ಮಾಡಬೇಕೆಂದು ಪ್ರಸ್ತಾವಿಸಲಾಗಿದೆ. ಇದೇ ರೀತಿ ೨೬ ಮೊಬಲಗಗಳ ಹೆಚ್ಚಿನ ಮೊಬಲಗುಗಳನ್ನು ಮಂಜೂರು ಮಾಡಬೇಕೆಂದು ಪ್ರಸ್ತಾವಿಸಲಾಗಿದೆ.

ಅಧ್ಯಕ್ಷರು.—ಪ್ರಸ್ತಾವನ್ನು ಮಂಡಿಸಲಾಯಿತು.

SMT. MUKTHARUNNISA BEGUM.—Sir, to-day morning I have given Notice under rule 334 regarding the strike of Teachers and Lecturers working on contract basis. Nearly 1200 teachers are sitting on Dharana in the Cubbon Park. It is an urgent matter. Why are you delaying?

ಶ್ರೀ ಆರ್. ರೋಷನ್ ಬೇಗ್.—ಮಾನ್ಯ ಅಧ್ಯಕ್ಷರೇ, ಇದು ಬಹಳ ಅರ್ಜೆಂಟ್ ಮ್ಯಾಟರ್ ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಅದಕ್ಕೆ ನಾನು ಆಮೇಲೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ ಈಗಲೇ ೪-೨೦ ಆಗಿದೆ. ಇನ್ನು ಶಿಕ್ಷಕರ ವಿಚಾರವನ್ನು ಯಾವಾಗ ತೆಗೆದುಕೊಳ್ಳುತ್ತೀರಿ? ಅವರು ಸುಮಾರು ೭-೮ ಸಾವಿರ ಜನರು ಬಂದು ಕಬ್ಬನ್ ಪಾರ್ಕಿನಲ್ಲಿ ಮುಷ್ಕರ ಹೂಡಿದ್ದಾರೆ. ಇದನ್ನು ಈಗಲೇ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಆರ್. ರೋಷನ್ ಬೇಗ್.—ನನಗೆ ಅದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಅದಕ್ಕೆ ನಾನು ಅವಕಾಶ ಕೊಡುತ್ತೇನೆ. ಈಗ ತಾವೆಲ್ಲರೂ ಕುಳಿತುಕೊಳ್ಳಿ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ ಅವರಿಗೂ ಅವಕಾಶ ಕೊಡುತ್ತೇನೆಂದು ಹೇಳುತ್ತಿದ್ದೀರಿ. ಮತ್ತೆ ಸಭೆಯನ್ನು ೫ ಗಂಟೆಗೆ ಅಡ್ಜರ್ನ್ ಮಾಡುತ್ತೇವೆಂದು ಹೇಳಿದ್ದೀರಿ. ಇದು ಹೇಗೆ ಸಾಧ್ಯ? ನಾನು ಮಾತನಾಡಲು ಶುರು ಮಾಡಿದರೆ ಇವತ್ತು ಮಾತನಾಡುತ್ತೇನೆ. ಮತ್ತೆ ನಾಳೆಯೂ ಮಾತನಾಡುತ್ತೇನೆ. ಇವತ್ತು ೫ ಗಂಟೆಗೆ ನಮಗೆ ಬೇರೆ ಒಂದು ಮೀಟಿಂಗ್ ಇದೆ.

ಅಧ್ಯಕ್ಷರು.—ನಾಗರತ್ನಮ್ಮನವರೇ, ನೀವು ೧೫-೨೦ ನಿಮಿಷಗಳಲ್ಲಿ ಇನೀಷಿಯೇಟ್ ಮಾಡಿ.

ಶ್ರೀ ಆರ್. ರೋಷನ್ ಬೇಗ್.—ಬೇರೆ ಅರ್ಜೆಂಟ್ ಮ್ಯಾಟರ್ ಇದೆ, ಅದನ್ನು ಡಿಸ್‌ಕಸ್ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ.

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ, ತಾವು ಮೊದಲು ಇನೀಷಿಯೇಟ್ ಮಾಡಿರಿ ನಂತರ ಅವರಿಗೆ ಮಾತನಾಡಲು ಅವಕಾಶ ಮಾಡಿ ಕೊಡುತ್ತೇನೆ.

(ಗೊಂದಲ)

ಶ್ರೀ ಆರ್. ರೋಷನ್ ಬೇಗ್.—ಇವತ್ತು ಇದನ್ನು ಫೈನಲೈಸ್ ಮಾಡಿದರೆ ಆ ಶಿಕ್ಷಕರೆಲ್ಲ ತಮ್ಮ ಊರುಗಳಿಗೆ ಹೋಗಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಅದರ ಮೇಲೆ ಪ್ರತ್ಯೇಕವಾಗಿ ಚರ್ಚೆ ಮಾಡಬಹುದು ಅದರೆ ಇದು ಇವತ್ತು ಅವಶ್ಯಕವಾಗಿ ಆಗಬೇಕು, ನಾಳೆ ಇದನ್ನು ವಿಧಾನಪರಿಷತ್ತಿಗೆ ಕಳಿಸ

ಬೇಕು. ಇದು ಮೊನ್ನೆ ಗೌರ್ವನರ್‌ರವರಿಂದ ಅಪ್ರೂವ್ ಆಗಿ ಬಂತು. ಆದ್ದರಿಂದ ತಾವೆಲ್ಲರೂ ಇದಕ್ಕೆ ಸಹಕರಿಸಬೇಕು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಸಹಕಾರ ಕೊಡುತ್ತೇವೆ. ಆದರೆ ನಮಗೆ ಇವತ್ತು ಒಂದು ಪ್ರೊಗ್ರಾಂ ಇದೆ. ಆದ್ದರಿಂದ ಸಭೆಯನ್ನು ೫ ಗಂಟೆಗೆ ಅಡ್ಜರ್ನ್ ಮಾಡಬೇಕು.

ಅಧ್ಯಕ್ಷರು.—ಈಗ ದಯವಿಟ್ಟು ಎಲ್ಲರೂ ಕೇಳಿತುಕೊಳ್ಳಿ.

ಶ್ರೀ ಕೆ.ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ನ್ನು ಇಟ್ಟಾಗ ಮತ್ತು ಇಡುತ್ತೇವೆ ಎಂದಾಗ ನಾನು ಬಹಳ ಬಹಳ ಎಕ್ಸ್‌ಪೆಕ್ಟ್ ಮಾಡಿದ್ದೆ, ಈ ಫ್ಯಾಮಿನ್ ಕಂಡೀಷನ್, ಡ್ರಾಟ್ ಕಂಡೀಷನ್ ಇದಕ್ಕೆಲ್ಲಾ ಬಹಳ ದೊಡ್ಡ ದಾಗಿ ಪರಿಹಾರ ದೊರೆಯುತ್ತದೆ ಮತ್ತು ಜನಗಳಿಗೆ ಅನುಕೂಲ ಮಾಡಿಕೊಡುತ್ತಾರೆ ಎಂದು ಈ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಏನು ಇದೆ ಎಂದರೆ ಬರೀ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿರತಕ್ಕಂತಹ ಅನುದಾನಕ್ಕೆ ಬಗ್ಗೆಯೇ ಪ್ರಸ್ತಾಪವಿದೆ. ಅದರಲ್ಲೂ ಇಲ್ಲಿ ರಿಇಂಬರ್ಸ್‌ಮೆಂಟ್ ಬಗ್ಗೆಯೇ ಪ್ರಸ್ತಾಪವಿದೆ ಹೊಸ ಪ್ರಸ್ತಾಪಗಳು ಯಾವುದು ಕಂಡುಬರುವುದಿಲ್ಲ. ಜಿಡ್ ಪಿ ಮತ್ತು ಮಂಡಲ್ ಪಂಚಾಯಿತಿಗಳು ಏನಾದರು ಅವರು ಮಾಡತಕ್ಕಂಥ ಕೆಲಸಗಳಿಗೆ ಏನಾದರು ಇವರು ಸಹಾಯ ಮಾಡುತ್ತಾರೆಯೇ ಜಾಸ್ತಿ ದುಡ್ಡೇನಾದರೂ ಕೊಡುತ್ತಾರೆಯೇ ಎಂಬುದರ ಬಗ್ಗೆ ಏನಾದರೂ ಪ್ರಪಚ್ಛೆ ಮಾಡಿದ್ದಾರೆಯೇ ಎಂದರೆ ಇದರಲ್ಲಿ ಏನೂ ಕಾಣುವುದಿಲ್ಲ. ಅಧ್ಯಕ್ಷರೇ, ಇವರು ಮೊದಲಿನಿಂದಲೂ ಹೇಳಿದ್ದದು ಎಂದರೆ ಆ ಸೀಡ್ಸ್ ಕಾರ್ಪೋರೇಷನ್‌ನಲ್ಲಿ ೨ ಕೋಟಿ ೧೬ ಲಕ್ಷ ರೂಪಾಯಿಗಳು ಲಾಸ್ ಆಗಿದೆ, ಈಗ ಅದನ್ನು ಸಬ್ಸಿಡಿ ಎಂದು ಕೊಟ್ಟು ಬಿಡಬೇಕೆಂದು ತೀರ್ಮಾನ ಮಾಡಿದ್ದಾರೆ. ಹಾಗಿದ್ದರೆ ಎಲ್ಲೆಲ್ಲಿ ಲಾಸ್ ಆಗುತ್ತದೆಯೋ ಆ ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೆ ಸಬ್ಸಿಡಿಯನ್ನು ಕೊಡಬೇಕಾಗುತ್ತದೆ, ಇವರದು ಒಳ್ಳೆಯ ಮ್ಯಾನೇಜಿಮೆಂಟ್ ಎಂದು ಹೇಳುವುದಕ್ಕೆ ಇದು ಒಂದು ಉದಾಹರಣೆಯಾಗಿದೆ. ಈಗ ೧೦ ಲಕ್ಷವನ್ನು ಆಯಿಲ್ ಸೀಡ್ಸ್ ಡೆವಲಪ್‌ಮೆಂಟ್‌ಗೆ ಕೊಟ್ಟಿದ್ದಾರೆ. ಅದಷ್ಟನ್ನು ಉಪಯೋಗಿಸಿಕೊಳ್ಳೋಣವೆಂದರೆ ಎಲ್ಲಿ ನೋಡಿದರೂ ಸೀಡ್ಸ್ ಇಲ್ಲ ಎನ್ನುವ ಕಾಲದಲ್ಲಿ ಕೇಂದ್ರದಿಂದ ಕೊಟ್ಟಿರುವ ೧೦ ಲಕ್ಷ ರೂಪಾಯಿ ಗಳನ್ನು ಉಪಯೋಗಿಸಿಕೊಳ್ಳದೆ ಇದನ್ನು ರಿವ್ಯಾಲ್ಯೂ ಮಾಡಬೇಕೆಂದು ಹೇಳುತ್ತಿದ್ದಾರೆ. ಜಿಡ್.ಪಿ.ಗೆ ಅನುದಾನವನ್ನು ಕೊಟ್ಟಿದ್ದಾರೆ, ಅದರ ಪ್ರಕಾರ ಇವರಿಗೆ ಒಂದು ಪ್ರಾಜೆಕ್ಟ್ ಇಲ್ಲ, ಪಾಲಿಸಿ ಇಲ್ಲ, ಇದರಲ್ಲಿ ಯಾವುದೂ ಪ್ರಾಪರ್ ಆಗಿಲ್ಲ. Till now 2.00 Crores has been distributed among the Zilla Parishad and Mandal Panchayath for drought affected areas. ಎಲ್ಲಿ ನೋಡಿದರು ದುಡ್ಡು ಇಲ್ಲ. ಯಾರನ್ನು ಕೇಳಿದರು ದುಡ್ಡು ಇಲ್ಲ. ಅವರು ಏನಾದರೂ ಪ್ರೋಗ್ರಾಂ ಹಾಕಿದ್ದಾರೆಯೇ ಇದು ಇಲ್ಲ. ಈಗ ಇವರ ಕೆಲಸಗಳೇನೆಂದರೆ ಬಿಲ್ಡಿಂಗ್ಸ್ ಇನ್ಯಾಗುರೇಟ್ ಮಾಡುವುದೂ, ಎಲ್ಲೆಲ್ಲಿಯೂ ಪೌಂಡೇಷನ್ ಸ್ಟೋನ್ ಹಾಕುವುದು ಇದರಲ್ಲೇ ಆಯಿತು. ಇವರ ಕೆಲಸ.

ಇನ್ನು ಅಧ್ಯಕ್ಷರೇ, ಅಗ್ರಿಕಲ್ಚರ್ ವಿಚಾರದಲ್ಲಿ ಹೇಳುವುದಾದರೆ ಕಾರ್ಪೋರೇಷನ್‌ವರಿಗೆ ಕೊಟ್ಟಿರುವುದು ಒಂದು ಲಾಸ್ ಆಯಿತು. ಎಲ್ಲಿ ನೋಡಿದರೂ ಸೀಡ್ಸ್ ಇಲ್ಲ, ಪ್ರೈವೇಟ್ ಏಜೆನ್ಸಿಯವರು ಮಾರತಕ್ಕಂಥದ್ದರಲ್ಲಿ ಒಂದಕ್ಕೆ ಹತ್ತರಷ್ಟು ದುಡ್ಡನ್ನು ಮಾಡುತ್ತಿದ್ದಾರೆ ನಾನು ಟೂರ್ ಹೋದಾಗ ಸುಮಾರು ೧೦-೧೨ ಪುಟಗಳ ಪತ್ರಗಳನ್ನು ಮುಖ್ಯಮಂತ್ರಿಯವರಿಗೆ ಬರೆದಿದ್ದೆ. ಎಲ್ಲಿ ಸೀಡ್ಸ್ ಇಲ್ಲ, ಅಲ್ಲಿ ಆದನ್ನು ಕೊಡಬೇಕು ಎಂದು ಇವರನ್ನು ಕೇಳಿದರೆ ನಾವು ಬರೆದಿದ್ದೇವೆ, ಬರುತ್ತದೆ ಎಂದು ಹೇಳುತ್ತಾರೆ. ಪ್ರೈವೇಟ್ ಏಜೆನ್ಸಿಯವರು ಒಂದಕ್ಕೆ ಹತ್ತರಷ್ಟು ಪ್ರಾಫಿಟ್ ಮಾಡುತ್ತಿದ್ದಾರೆ. ಕೇಳಿದರೆ ಅವರಿಗೆ ಒಳ್ಳೆಯ ಸೀಡ್ಸ್ ಕೊಡುವುದಿಲ್ಲ; ಅಥವಾ ಔಷಧಿ ಕೊಡುವುದಿಲ್ಲ. ಸೇಫ್ಟೀ ಎನ್ನುವುದೂ ಹೆಸರಿಗೂ ಇಲ್ಲ ಈ ಸ್ಕೆರ್‌ಸಿಟಿ ಆಫೆಕ್ಟೆಡ್ ಏರಿಯಾ ಅಂದರೆ ಮಲೆನಾಡು, ಕೂರ್ಗ್ ಚಿಕ್ಕಮಗಳೂರು, ಹಾಸನ ಇಲ್ಲಿ ಸುಮಾರು ೨೦ ಕೋಟಿ ರೂಪಾಯಿಯ ಆಲೂಗಡ್ಡೆ ಬೆಳೆ ನಾಶವಾಗಿದೆ. ನಾರ್ತ್‌ಕೆನರಾದಲ್ಲಿ ಬೆಳೆ ನಾಶವಾಗಿದೆ ಯಾವುದೂ ಅವರಿಗೆ ಅಕ್ಕರೆ ಇಲ್ಲ. ಸಂಬ್ಯನೆ ಹೇಳುತ್ತಾರೆ, ಬರೀ ಲೆಕ್ಕದಲ್ಲಿ ತೋರಿಸುತ್ತಾರೆಯೇ ಹೊರತು ಯಾವುದೇ ಒಂದು ಅನುಕೂಲವನ್ನು ಮಾಡಿಕೊಟ್ಟಲ್ಲ.

ಇನ್ನು ಸ್ಪೈಸ್ ಡೆವಲಪ್‌ಮೆಂಟ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. It is quite good ಆದರೆ ಅದೇ ರೀತಿ ಕೊಕನಟ್ ಡೆವಲಪ್‌ಮೆಂಟಾಗಲಿ, ಅಥವಾ ಕ್ಯಾಷು ಡೆವಲಪ್‌ಮೆಂಟ್‌ಗೆ ಯಾವರೀತಿಯ ಉತ್ತೇಜನವನ್ನು ಕೊಡುತ್ತಿಲ್ಲ. ಡೆವಲಪ್‌ಮೆಂಟ್ ಮಾಡಬೇಕೆಂದರೆ ಬರೀ ಸ್ಪೈಸ್

ಮಾಡಿದರೆ ಆಗುವುದಿಲ್ಲ. ಇದನ್ನು ಆರ್ಟಿಕಲ್ಸ್‌ರ್ ಫಾರ್ಮ್ಸ್‌ನಲ್ಲಿ ಜರ್ಮಿನೇಷನ್‌ಗೆ ನೀರು ಇಲ್ಲ, ಪಂಪ್‌ಗಳು ಇಲ್ಲ, ಕರೆಂಟ್ ಇಲ್ಲ ಇದಕ್ಕೆಲ್ಲಾ ಫೆಸಿಲಿಟಿಗಳನ್ನು ಒದಗಿಸಿಕೊಡಬೇಕು.

ಇನ್ನು ಫಾರ್ಮ್ಸ್ ಲೇಬರರ್ಸ್‌ನಲ್ಲಿ ಕನ್‌ಸಾಲಿಡೇಟೆಡ್ ಪೆನ್‌ಷನೇಬಲ್ ಮತ್ತು ನಾನ್‌ಪೆನ್‌ಷನೇಬಲ್ ಲೇಬರರ್ಸ್ ಎಂದು ಇದ್ದಾರೆ. ೧೨೦೦ ದಿವಸಗಳವರೆಗೆ ಕೆಲಸ ಮಾಡಿರುವವರು ನಾನ್‌ಪೆನ್‌ಷನ್ ಬಲ್ ಎಂದು ಇವರಿಗೆ ಕೂಲಿ ಜಾಸ್ತಿ ಮಾಡಬೇಕಾಗಿದೆ. ಇಷ್ಟರವರೆಗೆ ನೋಡಿದರೆ ಜಿಲ್ಲಾಪರಿಷತ್‌ನಿಂದ ಯಾವುದೇ ರೀತಿಯಲ್ಲೂ ದುಡ್ಡನ್ನು ಕೊಟ್ಟಿಲ್ಲ. ಈ ಕೆಲಸಗಳನ್ನು ದಯವಿಟ್ಟು ಮಾಡಿಸಬೇಕೆಂದು ನಾನು ಹೇಳುತ್ತೇನೆ. ಇನ್ನು ಅನಿಮಲ್ ಹಸ್‌ಬೆಂಡರಿಯ ವಿಚಾರದಲ್ಲಿ ಫಾರ್ಮರ್ ಡೆವಲಪ್‌ಮೆಂಟ್‌ಗೆ ದುಡ್ಡನ್ನು ಕೊಡುತ್ತಿದ್ದಾರೆ.

೪-೩೦ ಪಿ.ಎಂ.

ಈ ಯೋಜನೆಯನ್ನು ಎಕ್ಸಿಕ್ಯೂಟ್ ಮಾಡುವ ಬಗ್ಗೆ ಆರ್ಡರ್ ಮಾಡಬೇಕು. ಗೋಮಾಳವನ್ನು ಫಾರ್ಮರ್ ಡೆವಲಪ್‌ಮೆಂಟ್ ಮಾಡುವುದಕ್ಕೆ ತೆಗೆದುಕೊಳ್ಳಬೇಕು. ಅದನ್ನು ನಾವು ಮಾಡಿ ಎಂದು ಹೇಳಿದರೆ ಗೋಮಾಳಗಳನ್ನು ಬೇಕಾದವರಿಗೆ ಕೊಡುತ್ತಿದ್ದೀರಿ. ಗೋಮಾಳವನ್ನು ಗ್ರ್ಯಾಂಟ್ ಮಾಡುವ ಪದ್ಧತಿಯನ್ನು ನಿಲ್ಲಿಸಿ ಫಾರ್ಮರ್ ಬೆಳೆಯುವುದಕ್ಕೆ ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ, ನಮ್ಮ ಕೆರೆಯಲ್ಲಿ ೬-೭-೮ ವರ್ಷಗಳಿಂದಲೂ ಕ್ಷಾಮ ಇದೆ. ಇನ್ನು ಬರುವವರ್ಷ ಕ್ಷಾಮ ಬರುವುದಿಲ್ಲವೆಂದು ಹೇಳುವುದಕ್ಕೆ ಯಾವ ಗ್ಯಾರಂಟಿ. ಆದ್ದರಿಂದ ದಯವಿಟ್ಟು ರೆವಿನ್ಯೂ ಮಂತ್ರಿಗಳು ಇದನ್ನು ಗಮನಕ್ಕೆ ತೆಗೆದುಕೊಂಡು ಒಂದು ಪರ್ಮನೆಂಟ್ ಸಲ್ಯೂಷನ್ ಕಂಡುಹಿಡಿಯಬೇಕು. ಪ್ರತಿವರ್ಷ ಫ್ಯಾಮಿನ್ ಬರುತ್ತಲೇ ಇದೆ, ಡ್ರ್ಯಾಟ್ ಸಿಚ್ಯುವೇಷನ್ ಬಂದಾಗಲೆಲ್ಲಾ ಕೇಂದ್ರಸರ್ಕಾರದಿಂದ ಹಣವನ್ನು ಕೇಳುತ್ತಲೇ ಇರುತ್ತೀರಿ. ದುಡ್ಡನ್ನು ಕೊಟ್ಟರೂ ಮಲತಾಯಿ ಧೋರಣೆಯನ್ನು ಮಾಡುತ್ತಾರೆಂದರೆ ಹೇಳುವುದೇ ಆಗಿದೆ. ಅವರು ದುಡ್ಡನ್ನು ಕೊಡುತ್ತಾರೆ. ಆ ದುಡ್ಡನ್ನು ತೆಗೆದುಕೊಂಡುಹೋಗಿ ರಸ್ತೆಗೆ ಮಣ್ಣನ್ನು ಹಾಕಿಸಿದರೆ ಆಗುವುದಿಲ್ಲ. ಒಂದು ಪರ್ಮನೆಂಟ್ ಸೆಲ್ಯೂಷನ್ ಆಗುವುದಿಲ್ಲ. ಎಂಟು ವರ್ಷಗಳ ಕಾಲದಿಂದಲೂ ಸರಿಯಾದ ಮಳೆ ಬಂದಿಲ್ಲ. ಮುಂಗಾರು ಮಳೆಯೂ ಇಲ್ಲ, ಹಿಂಗಾರು ಮಳೆಯೂ ಇಲ್ಲ. ಇದರಿಂದಾಗಿ ಕುಡಿಯುವುದಕ್ಕೆ ನೀರಿಲ್ಲ, ಜನರಿಗೆ ನೀರಿಲ್ಲ, ದನಗಳಿಗೆ ನೀರಿಲ್ಲ. ಎಷ್ಟು ದುಡ್ಡು ಬಂದರೂ ಅದನ್ನು ಹಂಚಿಬಿಡುವುದರಿಂದ ಡ್ರ್ಯಾಟ್ ಸಾಲ್ವ್ ಆಗುವುದಿಲ್ಲ. ಆದ್ದರಿಂದ ಇದಕ್ಕೆಲ್ಲ ಒಂದು ಪರ್ಮನೆಂಟ್ ಸಲ್ಯೂಷನ್ ಕಂಡುಹಿಡಿಯಬೇಕೆಂದು ನಾನು ಸೂಚನೆ ನೀಡಬಯಸುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ ೫ರಲ್ಲಿ ಇಂಡಸ್ಟ್ರಿಯಲ್ ಪಾಲಿಸಿ ಬಗ್ಗೆ ಇವೊತ್ತಿನ ದಿವಸ ಪ್ರಶ್ನೆಯನ್ನು ಕೇಳಿದರೆ, ಯಾವುದೇ ಇಂಡಸ್ಟ್ರೀಸ್ ಮೇಲೆ ಯಾವ ರೀತಿಯಾದ ಕಂಟ್ರೋಲ್ ಸರ್ಕಾರಕ್ಕೆ ಇಲ್ಲ. ಅವರಿಗೆ ಇಷ್ಟಬಂದಹಾಗೆ ನಡೆಸಿಕೊಂಡು ಹೋಗಬಹುದಾಗಿದೆ. ಇವರು ಕೆಮಿಕಲ್ ಅಂಡ್ ಫರ್ಟಿಲೈಸರ್ಸ್ ಕಂಪನಿಯವರಿಗೆ ಹಣವನ್ನು ಕೊಡುವುದಕ್ಕೆ ಹೊರಟಿದ್ದಾರೆ. ಒಂದು ಕಂಪನಿಗೆ ಎಷ್ಟು ಹಣವನ್ನು ಕೊಡುವುದಕ್ಕೆ ಸಾಧ್ಯವೋ ಅಷ್ಟು ಹಣವನ್ನು ಕೊಡಲು ಸರ್ಕಾರದವರು ಗ್ಯಾರಂಟಿ ನಿಂತಿದ್ದಾರೆ. ಆದರೆ ಪಬ್ಲಿಕ್‌ಗೆ ಬ್ಯಾಂಕಿನವರು ಹಣವನ್ನು ಕೊಡಲು ಬಿಟ್ಟುಬಿಡಿ ಎಂದು ಹೇಳಿದರೆ ಅದು ನಿಮಗೆ ಆಗುತ್ತಿಲ್ಲ. ಷುಗರ್ ಫ್ಯಾಕ್ಟರಿಯವರ ಬಗ್ಗೆ, ಮಾನ್ಯ ರವೀಶ್‌ಕುಮಾರ್‌ರವರು ಹೇಳಿದರು. ಮಹದೇಶ್ವರ ಷುಗರ್ ಫ್ಯಾಕ್ಟರಿಯನ್ನು ಒಂದು ಲಕ್ಷ ರೂಪಾಯಿಗಳಿಗೆ ಕೊಟ್ಟುಬಿಟ್ಟಿರಿ. ಹೊವು ಮಾರಾಟ ಮಾಡಿದಂತೆ ಅದನ್ನು ಮಾರಿಬಿಟ್ಟಿರಿ. ಏತಕ್ಕೆ ಹೀಗೆ ಮಾಡುತ್ತಿದ್ದೀರಿ ? ಒಂದು ಲಕ್ಷ ರೂಪಾಯಿಗೆ ತೆಗೆದು ಕೊಂಡರು ೨೨೦ ಜನ ಲೇಬರರ್ಸ್‌ನಿಂದ ಕೆಲಸ ಮಾಡಿಸಿಕೊಂಡು ಹೋಗುತ್ತಿದ್ದಾರೆ. ಅವರಿಗೆ ಯಾವ ರೀತಿಯಾದ ನಷ್ಟವೂ ಇಲ್ಲ. ಮೆಷಿನ್ ಕೆಟ್ಟಿಲ್ಲ. ನೀವು ನಡೆಸುತ್ತಿದ್ದರೆ ಕಬ್ಬು ಸಾಕಾಗುವುದಿಲ್ಲವೆಂದು ಹೇಳುತ್ತಿದ್ದಿರಿ, ಈಗ ಅವರು ಕಬ್ಬುಬೇಡ ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದಾರೆ. ಯಾವ ಒಂದು ಪಾಲಿಸಿಮೇಲೆ ನಷ್ಟವಾಡಿ ಜನರಿಗೆ ಮೋಸ ಮಾಡುತ್ತಿದ್ದೀರಿ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಕೇವಲ ಒಂದು ಲಕ್ಷರೂಪಾಯಿಗಳಿಗೆ ಮಾರಾಟ ಮಾಡುವುದೂ ಉಂಟೆ. ಮುಖ್ಯಮಂತ್ರಿಗಳು ಇದನ್ನು ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯವರು ಪರಿಶೀಲಿಸಲಿ ಎಂದು ಹೇಳಿಬಿಟ್ಟರು. ಅವರು ಯಾವತ್ತು ಬರುವುದು, ಯಾವಾಗ ಪರಿಶೀಲನೆ ಮಾಡುವುದು ರಿಪೋರ್ಟ್ ಯಾವಾಗ ಕೊಡುವುದು. ಹೇಳಿದ್ದಕ್ಕೆ

ಒಂದು ಉತ್ತರವನ್ನು ಕೊಟ್ಟು ತಲೆಮರೆಸಿಕೊಳ್ಳುವುದು. ಕೇಳದೆ ಹೋದರೆ ಅವರು ಬೇಕಾದಹಾಗೆ ನಡೆದುಕೊಳ್ಳುವುದಾಗಿದೆ.

ಇನ್ನು ಮೈನ್ಸ್ ಮತ್ತು ಜಿಯಾಲಜಿ ಬಗ್ಗೆ ಜಿಪ್ಮ್ಯಾಂಡ್ ಅರ ಬಗ್ಗೆ ಹೇಳುವುದಾದರೆ ಚಾಮರಾಜ ನಗರದಲ್ಲಿ ಅನೇಕ ಸ್ಟೋಜ್‌ಗಳಲ್ಲಿ ಬೇಕಾದಷ್ಟು ಬ್ಲಾಕ್ ಸ್ಟೋನ್. ರೆಡ್‌ಸ್ಟೋನ್, ಗ್ರೀನ್‌ಸ್ಟೋನ್ ದೊರೆಯುತ್ತಿದೆ. ಇದೆಲ್ಲಾ ಡೈಮಂಡ್ ಸಮಾನವಾಗಿ ದುಡ್ಡು ಬರತಕ್ಕಂಥ ಲೆಕ್ಕಚಾರ ಇರುತ್ತದೆ. ಚಾಮರಾಜನಗರದಿಂದ ಇಂಥ ಒಂದು ಕಲ್ಲುಗಳನ್ನು ತೆಗೆದುಕೊಂಡು ಹೋಗುತ್ತಿರುವವರನ್ನು ತಿಲ್ಲಿಸಿದ ಒಬ್ಬ ಅಸ್ಟೆಂಟ್ ಕಮಿಷನರ್‌ರವರನ್ನು ತರಾಟೆಗೆ ತೆಗೆದುಕೊಡು ಚಿತ್ರಹಿಂಸೆ ಕೊಡುತ್ತಿದ್ದಾರೆ. ಚೀಫ್ ಮಿನಿಸ್ಟರ್ ಹೇಳಿದ್ದಾರೆ ಒಬ್ಬ ವೆಸ್ಟೆಡ್ ಇಂಟರೆಸ್ಟ್ ಹೇಳಿದಹಾಗೆ ಮಾಡಿಲಿಲ್ಲ, ಅವರು ಹೇಳಿದ ಹಾಗೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಡೆಪ್ಯುಟಿ ಕಮಿಷನರ್ ಕೆಟ್ಟಮನುಷ್ಯ ಇಡುತ್ತಾರೆ. ಬಾಯಿಗೆ ಬಂದಹಾಗೆ ಆಫೀಸರುಗಳನ್ನು ಬಯ್ಯುತ್ತಿರುತ್ತಾರೆ. ಪರಿಸ್ಥಿತಿ ಅಷ್ಟು ದುಸ್ತಿತಿಗೆ ಹೋಗಿದೆ.

ನೀವು ಆ ಅಸಿಸ್ಟೆಂಟ್ ಕಮೀಷನರ್‌ಗಳಿಗೆ ಶಭಾಶ್‌ಗಿರಿ ಕೊಟ್ಟಿದ್ದೀರಿ, ಸರ್ಟಿಫಿಕೇಟ್ ಕೊಟ್ಟಿದ್ದೀರಿ. ಆದರೆ ಅಲ್ಲಿನ ಪ್ರಭಾವಿ ಜನಗಳು ಭೀಮಾರಿ ಹಾಕಿ ಹಾಗೆ ಹೀಗೆ ಎಂದು ಬಾಯಿಗೆ ಬಂದ ಹಾಗೆ ಬಯ್ಯುತ್ತಾರೆ. ಇದನ್ನು ತಾವು ನೋಡಿಕೊಳ್ಳಬೇಕಾಗುತ್ತದೆ, ವ್ಯಾಲ್ಯುಬಲ್ ಕ್ಯಾರೀಸ್ ಫಾರಿನ್‌ಎಕ್ಸ್‌ಚೇಂಜ್ ಅರ್ನ್ ಮಾಡತಕ್ಕ ಕ್ಯಾರೀಸ್ ಅನ್ನು ಮಾಡುವುದುಸರಿಯಲ್ಲ.ದಯವಿಟ್ಟುಅದನ್ನು ಕಾಪಾಡಿಕೊಳ್ಳುವುದನ್ನು ನೋಡಬೇಕಾ. ೧,೧೦ ಪ್ರೈವೇಜ್ ಪಾರ್ಟೀಸ್ ಫಾರಿನ್ ಎಕ್ಸ್‌ಚೇಂಜನ್ನು ಅರ್ನ್ ಮಾಡುತ್ತಿದ್ದಾರೆ. ಇದನ್ನೆಲ್ಲಾ ಬಿಟ್ಟು ಯಾವನೋ ಮರುಳು, ಕಲ್ಲು ತೆಗೆದುಕೊಂಡು ಹೋಗುತ್ತಿದ್ದಾನೆಂದು ಆ ಲಾರಿಯನ್ನು ಹಿಡಿದು ೪-೫ ದಿನ ನಿಲ್ಲಿಸಿಕೊಂಡು ಕೆಲಸ ಮಾಡುವವರಿಗೂ ಕೆಲಸ ಇಲ್ಲದಂತ ಮಾಡಿ ಅವರಿಂದ ಡಬಲ್ ಟ್ಯಾಕ್ಸ್ ವಸೂಲ್ಮಾಡುವುದನ್ನು ಮಾಡುತ್ತಿದ್ದಾರೆ. ಆನೆಯೇ ಹೋಗುತ್ತಿರುವಾಗ ಅದರೆ ಬಾಲವನ್ನು ಹಿಡಿದುಕೊಂಡು ಎಳೆದಾಡಿದ ಹಾಗೆ ಸರ್ಕಾರ ಮಾಡುತ್ತಿದೆ ಎಂಬುದರಲ್ಲಿ ಏನೂ ಸಂಶಯ ಇಲ್ಲ.

ಇನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ತೆಗೆದುಕೊಂಡರೆ ದೇಶಿ ಟೆಕ್ಸ್‌ಟೈಲ್ಸ್ ಮಿಲ್ ಇದೆ. ಆದರ ಇಂಟರೆಸ್ಟ್‌ಗೋಸ್ಕರ ಇವರು ದುಡ್ಡು ಕೊಡುತ್ತಿದ್ದಾರೆ. ಸರ್ಕಾರ ಗ್ಯಾರಂಟಿ ಕೊಟ್ಟಿದೆ ಎಂದು ಕೊಡುವುದೆ ? ಯಾವ ತರಹದ ಪಾಲಿಸಿ ಇದು ? ಯಾವುದಾದರೂ ಮಿಲ್ಲಿಗೆ ಗ್ಯಾರಂಟಿ ಕೊಟ್ಟಿದ್ದೇ ವೆಂದು ಇದರ ಇಂಟರೆಸ್ಟನ್ನು ಸರ್ಕಾರ ಕೊಡುವುದೆ ? ಒಬ್ಬರಿಗೆ ಕೊಡಬಹುದು, ಇನ್ನೊಬ್ಬರಿಗೆ ಕೊಡಬಾರದೆ ? ಸಂಕೇಶ್ವರ ಷುಗರ್ ಮಿಲ್‌ನವರು ನಿಮಗೆ ಏನು ಮಾಡಿದ್ದರು ? ಅವರಿಗೆ ಏಕೆ ಕೊಡಲಿಲ್ಲ ? ನೀವು ಮಿಲ್‌ನವರಿಗೆ ಕೊಡುವ ದುಡ್ಡನ್ನು ಜನರಿಗೆ ಕೊಟ್ಟಿದ್ದರೆ ಆಗುತ್ತಿರಲಿಲ್ಲವೆ ? ಇಂಟರೆಸ್ಟ್ ಡಿಕ್ಲೇರ್ ಆಗಿದೆ ಎಂದು ಸರ್ಕಾರ ಕೊಟ್ಟರೆ ಇದು ಯಾವ ಪಾಲಿಸಿ ? ಈ ಸರ್ಕಾರದ ನಡವಳಿಕೆ ನಸಗಂತೂ ವಿಚಿತ್ರ ಅನ್ನಿಸುತ್ತದೆ.

ಯೂತ್ ಸರ್ವೀಸಸ್ ಬಗ್ಗೆ ಹೇಳುವುದಾದರೆ, ಡೈರೆಕ್ಟರೇಟ್ ಆಫ್ ಯೂತ್ ಸರ್ವೀಸಸ್‌ಗೆ ೫೨ ಸಾವಿರ ರೂಪಾಯಿಂಗಳನ್ನು for development of sportsಗೆ ೧೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ- The Government of India has released a total amount of Rs. 3.49 lakhs for development of sports,

ಕೇಂದ್ರ ಸರ್ಕಾರದವರು ಕೊಟ್ಟಿರುವ ಹಣವನ್ನು ಉಪಯೋಗಿಸಿಕೊಂಡಿದ್ದಾರೆಯೆ? ಚಿತ್ರದುರ್ಗಕ್ಕೆ ಹೋದಾಗ ಒನಕೆ ಓಬವ್ವನ ಸ್ಟೇಡಿಯಂ, ಅನ್ನು ನೋಡಿದೆ. ಆ ಕೆಲಸ ಅರ್ಧಂಬರ್ಧ ಆಗಿ ಹಾಗೆಯೇ ನಿಂತಿದೆ. ಕೇಂದ್ರ ಸರ್ಕಾರದವರು ರೂರಲ್ ಸ್ಟೇಡಿಯಂಗೆ ಎಂದು ದುಡ್ಡು ಕೊಡುತ್ತಿದ್ದರು. ಅದನ್ನು ಏತಕ್ಕೆ ಉಪಯೋಗಿಸಿಕೊಂಡಿಲ್ಲವೆಂದು ಕೇಳುತ್ತೇನೆ. ನೀವು ಯೂತ್ಸ್‌ಗಾಗಿ ಹಣ ಮಾಡುವುದು ಇದೆಯೇ? ಆಟವಾಡುವ ಸ್ಟೇಡಿಯಂ ಅನ್ನು ಅರ್ಧಂಬರ್ಧ ಕಟ್ಟಿ ಬಿಡುವುದೆ? ಕೇಂದ್ರ ಸರ್ಕಾರದವರು ದುಡ್ಡು ಕೊಡುವಾಗ ಅದನ್ನು ಉಪಯೋಗಿಸಿಕೊಂಡು ಏತಕ್ಕೆ ಪೂರ್ಣ ಮಾಡಲಿಲ್ಲ ಅವರು ಈ ಬಾಬಿಗಾಗಿ ಕೊಡತಕ್ಕ ಹಣವನ್ನು ಏತಕ್ಕೆ ಉಪಯೋಗಿಸಿಕೊಳ್ಳುತ್ತಿಲ್ಲ?

ಡಿಮ್ಯಾಂಡ್ ನಂ. ೧೨ರಲ್ಲಿ ಇಂಡಿಪೆಂಡೆನ್ಸ್‌ಡೇ ಸೆಲಬರೇಷನ್‌ಗೆ (೪೦ನೇ ವಾರ್ಷಿಕೊತ್ಸವಕ್ಕೆ) ೩೧ ಲಕ್ಷದ ೫೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಅಷ್ಟೊಂದು ಹಣವನ್ನು ಏತಕ್ಕಾಗಿ ಖರ್ಚು ಮಾಡಿದ್ದೀರಿ? ನಾನಂತೂ ಇಂಡಿಪೆಂಡನ್ಸ್‌ಡೇಗೆ ಮಾಡುತ್ತಾರೆಂದು ಪೂರ್ತಿಯಾಗಿ

ನೋಡಿದೆ. ಸ್ವಾತಂತ್ರ್ಯ ಹೋರಾಟಗಾರರಿಗೆ ಪೆರೆಂಟೇಷನ್ ಕೊಡುವುದನ್ನು ಬಿಟ್ಟರೆ ಇನ್ನೇನು ಮಾಡಿದ್ದೀರಿ? ಯಾವ ತರಹದ ಸೆಲಬರೇಷನ್ ಕೂಡ ವಿಶೇಷವಾಗಿ ಕಾಣಲಿಲ್ಲ. ಆದರೂ ೩೧½ ಲಕ್ಷ ರೂಪಾಯಿಗಳನ್ನು ಇಂಡಿಪೆಂಡೆನ್ಸ್‌ಡೇಗಾಗಿ ಖರ್ಚು ಮಾಡಿದ್ದಾರೆ. ಪೆನ್‌ಷನರ್ಸ್‌ಗೆ ಬೇರೆ ಇದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಇಂಡಿಪೆಂಡನ್ಸ್‌ಡೇ ಅಕೇಷನ್‌ನಲ್ಲಿ ಖರ್ಚು ಮಾಡಿರುವುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನನಗೆ ಲೆಕ್ಕ ಗೊತ್ತಾಗುವುದಿಲ್ಲವೆಂದರೆ ಅವರಿಗೂ ಗೊತ್ತಾಗುವುದಿಲ್ಲವೆ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅದಕ್ಕೆ ಪ್ರತ್ಯೇಕ ಹೆಡ್ ಇದೆ.

ಶ್ರೀಮತಿ ಕೆ. ಎಸ್. ನಾಗರತಮ್ಮ.—೩೧½ ಲಕ್ಷ ರೂಪಾಯಿಗಳನ್ನು ಇಂಡಿಪೆಂಡೆನ್ಸ್‌ಡೇ ಸೆಲಬರೇಷನ್‌ಗೆ ಖರ್ಚು ಮಾಡಿದ್ದಾರೆ. ಪ್ರೈಮರಿ ಮತ್ತು ಅಡಲ್ಟ್ ಎಜುಕೇಷನ್‌ನಲ್ಲಿ ಈಗ ಅವರಿಗೇನಾದರೂ ದುಡ್ಡು ಕೊಟ್ಟಿದ್ದೀರಾ? ಅಧ್ಯಕ್ಷರೇ, ತಮಾಷೆ ಏನೆಂದರೆ ಎಂದು ಹೇಳಿದ್ದಾರೆ. ಇದು ಯಾವ ತರಹದ ರೆಕವರಿ? ಯಾವ ತರಹದ ಅಕೌಂಟಿಂಗ್?

ಶ್ರೀ ಎಸ್. ಆರ್. ಬೊಮ್ಮಾಯಿ.—ಅಡ್ಜಸ್ಟ್‌ಮೆಂಟ್.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—"Amount is recoverable from Zilla parishad" ಬುಕ್ ಅಡ್ಜಸ್ಟ್‌ಮೆಂಟ್ ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಅಷ್ಟೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದೂ ಮಾಡಬೇಕಾಗುತ್ತದೆ.

ಶ್ರೀ ಕೆ. ಎಸ್. ನಾಗರತ್ನಮ್ಮ.—ಹೂ, ಅದೂ ಮಾಡಬೇಕಾಗುತ್ತದೆ. ರಾಜ್ಯಭಾರ ಮಾಡುವಾಗ ಮಾಡಬೇಕಾಗುತ್ತದೆ. ಆದರೆ ಇನ್ನೊಬ್ಬರನ್ನು ಅನ್ನುವಾಗ ಇದಲ್ಲಾ ಬರುವುದಿಲ್ಲ. ಅಧ್ಯಕ್ಷರೇ ಐದು ನಿಮಿಷಕ್ಕೆ ಸರಿಯಾಗಿ ನಾನು ಮುಗಿಸುತ್ತೇನೆ.

ಶ್ರೀ ಯು. ಭೂಪತಿ.—ಅಧ್ಯಕ್ಷರೇ, ಅವರು ೫ ಗಂಟೆಗೆ ಮುಗಿಸಿದರೆ ಬೇರೆ ವಿಚಾರ ಚರ್ಚೆಗಿದೆ.

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ ಮಾನ್ಯ ಕೃಷ್ಣನ್ ಅವರೆ ಅವರಿಗೆ ಸ್ವಲ್ಪ ಹೇಳಿ.

ಶ್ರೀ ಯು ಭೂಪತಿ.—ತಾವೇ ಹೇಳಿದರೆ ಸಾಕು. ಅವರು ಹೇಳುವುದು ಬೇಕಾಗಿಲ್ಲ. ೧೫ ನಿಮಿಷ ಮಾತನಾಡಿ ಎಂದು ನೀವು ಹೇಳಿದ್ದೀರಿ.

ಶ್ರೀಮತಿ ಕೆ. ಎಸ್. ನಾಗರತಮ್ಮ.—೧೫ ನಿಮಿಷ ಆಯಿತೇ?

ಶ್ರೀ ಯು. ಭೂಪತಿ.—ಇಲ್ಲಮ್ಮ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸರಿ ಮತ್ತೆ. ಡಿವ್ಯಾಂಡ್ ೧೪ರಲ್ಲಿ ವಿದ್ಯಾವರ್ಧಕ ಸಂಘಕ್ಕೆ ಸೆಂಟನರಿ ಬಿಲ್ಡಿಂಗ್‌ಗೆ ೫ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ನನ್ನದೇನೂ ಅಡ್ಡಿ ಇಲ್ಲ ಸ್ಕೂಲ್‌ಗಳಿಗೆ ಕೊಟ್ಟಿರೆ. ನಾನು ಅನೇಕ ಕಡೆಗಳಲ್ಲಿ ನೋಡಿದ್ದೇನೆ ಮರದ ಕೆಳಗೆ ಕ್ಲಾಸ್‌ಗಳನ್ನು ಮಾಡುತ್ತಿದ್ದಾರೆ. ಬಾಕಿ ಕಡೆಯೂ ಇದೇರೀತಿ ಏತಕ್ಕೆ ಕೊಡಬಾರದಾಗಿತ್ತು. ಎಷ್ಟೋ ಟೀಚರ್‌ಗಳಿಗೆ ಸಂಬಳ ಕೊಟ್ಟಿಲ್ಲ. ಚಿತ್ರದುರ್ಗ ಮಾಧ್ಯಮಿಕ ವಿದ್ಯಾಶಾಲೆಯಲ್ಲಿ, ಖಾನಾಪುರ, ಬೆಳಗಾಂ ಸಂಸ್ಥಾನಪುರ ಅನೇಕ ಕಡೆಗಳಲ್ಲಿ ಟೀಚರ್‌ಗಳಿಗೆ ಸಂಬಳ ಕೊಟ್ಟಿಲ್ಲ. ಅದರೆ ಇಲ್ಲಿ ನೋಡಿದರೆ ಒಟ್ಟೊಟ್ಟಿಗೆ ಗೋವಿಂದ ಆಗುತ್ತಿದೆ. ಇದಕ್ಕೆಲ್ಲಾ ದುಡ್ಡು ಎಲ್ಲಿ ಬರುತ್ತದೆ? ಯಾವುದಕ್ಕೂ ಪ್ರೋಗ್ರಾಂ, ಪಾಲಿಸಿಇಲ್ಲ. ಎಜುಕೇಷನ್‌ಗೆ ದುಡ್ಡು ಕೊಟ್ಟಿರುವುದಕ್ಕೆ ಆಬ್ಜಂತರ ಇಲ್ಲ. ಡಿವ್ಯಾಂಡ್ ನಂಬರ್ ೨೦. ಇದರಲ್ಲಿಲ್ಲ ಬೃಂದಾವನ್ ಸಮಿತಿ, ನ್ಯೂ ಡೆಲ್ಲಿ ಇವರಿಗೆ ವಿಜಯನಗರ ಆರ್ಕಿಟೆಕ್ಚರಲ್ ಸ್ಟೈಲ್ ನಲ್ಲಿ ಕಲ್ಚರಲ್ ಸೆಂಟರ್ ಮಾಡುವುದಕ್ಕೆ ಮೊದಲೇ ಎರಡೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದೇನು ಕಥೆ? ಎಸ್ಟಿಮೇಟೆಡ್ ಕಾಸ್ಟ್ ೨೫ ಲಕ್ಷ ರೂಪಾಯಿ. ಆದರೆ ಮೊದಲೇ ಎರಡೂವರೆ ಲಕ್ಷ ರೂಪಾಯಿ ಕೊಟ್ಟಿದ್ದಾರೆ.ನಮಗೇ ಇಲ್ಲ. ಅಲ್ಲೆಲ್ಲಾ ಏನೋ ಕೊಡುವುದಕ್ಕೆ ಹೋಗಿದ್ದಾರೆ ಐಟಂ ೨೦ರಲ್ಲಿ The State Government contributed a sum of Rs. 50 lakhs towards Sri Lanka Relief Fund. A sum of Rs. 15 lakhs has been sanctioned to the

Government of Rajasthan and Haryana...'' ಎಂದು ಹೇಳಿದ್ದಾರೆ. ಅದು ಕೊಡಬೇಕಂ, ಪರ್ವಾಗಿಲ್ಲ. ಆದರೆ ನಿಮಗೆ ಇದೆಯೇ? ತುಪ್ಪ ಇದೆಯೇ? ಎಣ್ಣೆ ಇದೆಯೆ? ನಿಮಗೆ ಏನಿದೆಯಪ್ಪ? ಏನೂ ಇಲ್ಲ ೫೦, ೧೫ ಮತ್ತು ೧೫ ಒಟ್ಟು ೮೦ ಲಕ್ಷರೂಪಾಯಿ ಕೊಟ್ಟಿದ್ದಾರೆ. ನಮ್ಮಲ್ಲಿ ಬರಗಾಲ ಟಮಟೆ ಹೊಡ್ಕೊಂಡು ಸಾರುತ್ತಿದೆ. ಇಲ್ಲಿ ಯಾರೂ ಏನೂ ಕೊಡುವ ಹಾಗಿಲ್ಲ. ಎಲ್ಲರೆ ಮನೆ ಜಪ್ತಿ ಮಾಡುತ್ತಿದ್ದಾರೆ. ಹರಾಜು ಹಾಕುತ್ತಿದ್ದಾರೆ. ಕುಡಿಕೆ, ಮಡಿಕೆ ತರುತ್ತಿದ್ದಾರೆ. ಇವರು ಮಹಾ ದಾನಿಗಳು. ನಮ್ಮೊಬರೆಲ್ಲರೂ ಹೊಟ್ಟೆಗೆ ಬಟ್ಟೆ ಸುತ್ತಿಕೊಂಡು ತಣ್ಣೀರು ಹಾಕೊಂಡು ಕುತ್ಕೊಂಡಿದ್ದಾರೆ. ಡಿಮ್ಯಾಂಡ್ ನಂ. ೨೨ ರಲ್ಲಿ ಹುಲ್ಲುಗಾವಲು ಬೆಳೆಸುವುದಕ್ಕೆ ಅಂದಾಜು ವೆಚ್ಚ ೪೭೩.೯೦ ಲಕ್ಷ ರೂಪಾಯಿ ಕೊಡುತ್ತಿದ್ದಾರೆ. ಈ ವರ್ಷ ೬೪.೭೭ ಲಕ್ಷ ರೂಪಾಯಿ ಕೊಡುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಯ್ನಾ ಫಾರಂ ಮಂಗಿಬಿಟ್ಟರು. ಮೂರು ಕಾಸೂ ಬೆಲೆ ಇಲ್ಲದ ಹಾಗೆ ಹಾಗೆ ಮಾಡಿಬಿಟ್ಟರು.

ಒಂದೇ ಪ್ರಾಜೆಕ್ಟ್‌ಗೆ ಇಷ್ಟೊಂದು ಇನ್ವೆಸ್ಟ್ ಮಾಡುವಂಥದ್ದು ಸರಿಯಾದುದಲ್ಲ. ಇದರ ಬಗ್ಗೆ ತಜ್ಞಿಕೆ ಮಾಡಿಸಿ. ವಿಭಾಗ ಮಟ್ಟದಲ್ಲೂ ಅನೇಕ ಫಾರಂಗಳನ್ನೇ ಮಾಡುವುದು ಒಳ್ಳೆಯದು. ಒಂದೇ ಪ್ರಾಜೆಕ್ಟ್‌ಗೆ ಇಷ್ಟೊಂದು ಹಣವನ್ನು ಇನ್ವೆಸ್ಟ್ ಮಾಡಿ ಹಣ ಹಾಳು ಮಾಡುವುದು ತಪ್ಪು ಎಂದು ಸೂಚನೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

ನಂತರ ಅರಣ್ಯ ಅಭಿವೃದ್ಧಿಯ ಬಗ್ಗೆ ಹೇಳುವುದಾದರೆ, ಸರ್ಕಾರದವರು ಯಾವಾಗಲೂ 'We have planted in lakhs, distributed seedlings in lakhs and invested in lakhs' ಆದರೆ ಅದರ ಫಲಿತಾಂಶ ಏನು ಅಂದರೆ ದೊಡ್ಡ ಸೊನ್ನೆ. ಎಲ್ಲಿ ನೋಡಿದರೂ ಕಾಡು ಕಾಣಿಸುವುದೇ ಇಲ್ಲ. ಕಾಡು ಬೀಳು ಬಿದಿದೆ. ನೀವು ಕೊಟ್ಟಿರುವಂಥ ಲಕ್ಷ ಲಕ್ಷ ಸೀಡ್ಲಿಂಗ್ಸ್, ಲಕ್ಷ ಲಕ್ಷ ಇನ್ವೆಸ್ಟ್‌ಮೆಂಟ್, ಲಕ್ಷ ಲಕ್ಷ ಪ್ಲಾಂಟೇಷನ್ ನಾನಂ ಕಾಣುಲೇ ಇಲ್ಲ. ನಮ್ಮ ಅರಣ್ಯ ಸಚಿವರು ಇಲ್ಲೇ ಇರುವುದರಿಂದ ಒಂದು ಮಾತನ್ನು ಹೇಳಬೇಕಾಗುತ್ತದೆ. ಬಂಡೀಪುರ ಅರಣ್ಯದಲ್ಲಿ ಇರತಕ್ಕ ಎಲ್ಲಾ ವೈಲ್ಡ್ ಲೈಫ್ ಪ್ರಾಣಿಗಳು ಬೇರೆಕಡೆಗೆ ವೈಗ್ರೇಟ್ ಆಗುತ್ತಿವೆ. ದಯವಾಡಿ ತಾವು ಅವುಗಳಿಗೆ ನೀರಿನ ವ್ಯವಸ್ಥೆಯನ್ನು ಮಾಡಬೇಕು. ನೀರಿನ ವ್ಯವಸ್ಥೆಯನ್ನು ಮಾಡದಿದ್ದರೆ ಆ ಕಾಡಿನಲ್ಲಿ ನೀವು ಆನೆಯನ್ನು ಹುಡುಕಿದರೂ ಸಿಕ್ಕುವುದಿಲ್ಲ. ಆಮೇಲೆ ನಾವುಗಳೇ ಕಾಡಂ ಪ್ರಾಣಿಗಳಾಗಬೇಕಾಗುತ್ತದೆ. ದಪ್ಪಗಿರುವವರೆಲ್ಲಾ ಆನೆಗಳಾಗಬೇಕು. ಸಣ್ಣಗಿರುವವರೆಲ್ಲ ಜಿಂಕೆಗಳು ಆಗಬೇಕು. ನಾವುಗಳೇ ಅಲ್ಲಿ ಹೋಗಿ ಕುಳಿತುಕೊಳ್ಳಬೇಕಾಗುತ್ತದೆ. ಬಂಡೀಪುರದಲ್ಲಿ ವೈಲ್ಡ್ ಲೈಫ್ ಪ್ರಾಣಿಗಳು ಈಗ ಸಿಕ್ಕುವುದೇ ಇಲ್ಲ. ನೀರಿನ ತೊಂದರೆ ಬಹಳ ಇದೆ. ತಕ್ಷಣವೇ ಆ ಪ್ರಾಣಿಗಳಿಗೆ ನೀರಿನ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ ಯಾರು ಹತ್ತಾರು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ, ಅವರ ಜಮೀನಿನಲ್ಲಿ ನಿಮ್ಮ ಇಲಾಖೆಯವರು ಹೋಗಿ ಕುಳಿತುಕೊಂಡು, ಅವರುಗಳನ್ನು ಅಲ್ಲಿಂದ ಓಡಿಸಿ ಗಿಡಗಳನ್ನು ನೆಡುವುದಕ್ಕೆ ಹೋಗಿದ್ದಾರೆ. ಗುಡ್ಡಗಳು ಇವೆ, ಅನುಪಯುಂಕ್ತ ಜಮೀನು ಇದೆ. ಅಲ್ಲಿ ಏಕೆ ನಿಮ್ಮ ಇಲಾಖೆಯವರು ಅರಣ್ಯವನ್ನು ಬೆಳೆಸುವುದಿಲ್ಲ. ಯಾರು ಸಾಗುವಳಿ ಮಾಡುತ್ತಿದ್ದಾರೆ ಅಲ್ಲಿಯೇ ಹೋಗಿ ಗಿಡಗಳನ್ನು ನೆಡುವುದಕ್ಕೆ ಹೋಗಬೇಕೆ ? ಅದನ್ನು ತಪ್ಪಿಸಿ ಇರುವಂತಹ ಗಾಡ್ಡಗಾಡು ಪ್ರದೇಶದಲ್ಲಿ ಹೋಗಿ ಅಲ್ಲಿ ಅರಣ್ಯವನ್ನು ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನ ಹಾಡಿ. ಎಲ್ಲಾ ಮಂತ್ರಿಗಳು ಎಲ್ಲಿಗೆ ಹೋಗಿದ್ದಾರೆ ? ಇರತಕ್ಕ ೩೫ ಜನ ಮಂತ್ರಿಗಳೂ ಮೇಲ್ಮನೆಯಲ್ಲಿದ್ದಾರೆಯೇ ? ಮುಖ್ಯ ಮಂತ್ರಿಗಳೇನೋ ದೆಹಲಿಗೆ ಹೋಗಿದ್ದಾರೆ. ಬಾಕಿಯವರು ಎಲ್ಲಿಗೆ ಹೋಗಿದ್ದಾರೆ ? ಅವರು ವಿಧಾನ ಸಭೆಯಲ್ಲಿ ಇರುವುದಿಲ್ಲ ? ನಮ್ಮಪರನ್ನು ಮಾತ್ರ ತಾವು ೬ ಗಂಟೆಯವರೆಗೂ ಕೂಡಿಸಿಕೊಳ್ಳುತ್ತೀರಿ ? ಅದೇ ತರಹ ಅವರನ್ನೂ ಏಕೆ ತಾವು ಕೂಡಿಸಿಕೊಳ್ಳುವುದಿಲ್ಲ. ನಮಗೆ ಒಂದು ತರಹ ರೂಲ್ಸ್, ಅವರಿಗೊಂದು ತರಹ ರೂಲ್ಸ್ ಇದೆಯೇ ? ಅರಣ್ಯ ಸಚಿವರು ಇದ್ದಾರೆ. ಸರ್ವಜ್ಞಮೂರ್ತಿ ಶ್ರೀ ಲಕ್ಷ್ಮೀಸಾಗರ್ ಇದ್ದಾರೆ. ಇನ್ನು ಬಾಕಿಯವರು ಎಲ್ಲಿಗೆ ಹೋಗಿದ್ದಾರೆ ? ಇವರಿಗೆ ಹೇಳುವವರು, ಕೇಳುವವರು ಯಾರೂ ಇಲ್ಲವೆ ? ನಾವು ಹೇಗೆ ಮಾತನಾಡಬೇಕು ? ಅಂದರೆ ನಾವು ಮಾತನಾಡುವಂತಹದ್ದು ಅಷ್ಟೊಂದು ಹಗುರವೆ ? ಇದೇನಿದು ?

ಇನ್ನು ಮೆಡಿಕಲ್ ಡಿಪಾರ್ಟ್‌ಮೆಂಟ್ — ಕುರ್ಚಿಗೆ ಹೇಳುತ್ತೇನೆ.

ಶ್ರೀ ಬಿ. ಲಕ್ಕಪ್ಪ. —ಎರಡೂ ಒಂದೇಯಾಗಿದೆ.

ಶ್ರೀ ಕೆ. ಎಸ್. ನಾಗರತ್ನಮ್ಮ —ಮೆಡಿಕಲ್ ಸರ್ವಿಸಸ್‌ನಲ್ಲಿ ಟೋಕನ್ ಗ್ರಾಂಟ್ ತಂದು ಒಂದೊಂದು ಸಾವಿರ ಹಣವನ್ನು ಕೊಟ್ಟಿದ್ದಾರೆ. ಅಲ್ಲಿ ಏನು ಇರಬೇಕೆಂದು ಗೊತ್ತಿರುವುದಿಲ್ಲ. ಔಷಧಿಯೂ ಇಲ್ಲ. ಆಮೇಲೆ ಮೆಡಿಸಿನ್ ಸಪ್ಲೈ ಕೂಡ ಇಲ್ಲ. ಫ್ಯಾಮಿಲಿ ಪ್ಲ್ಯಾನಿಂಗ್ ಆಪರೇಷನ್ ಮಾಡಿಸಿಕೊಂಡವರಿಗೆ ದುಡ್ಡು ಕೊಟ್ಟಿಲ್ಲ. ಅಲ್ಲಿರತಕ್ಕಂತಹ ಡಾಕ್ಟರ್ಸ್ ಹುದ್ದೆಗಳು ಖಾಲಿ ಇವೆ, ಅವುಗಳನ್ನು ತುಂಬಿಲ್ಲ. ಅನೇಕ ಆಸ್ಪತ್ರೆಗಳಲ್ಲಿ ಸ್ಟಾಫ್ ಅಂದರೆ ಎ.ಎನ್.ಎಂ. ಇರಬಹುದು. ಮಿಡ್‌ವೈಫ್ ಆಗಿರಬಹುದು, ಇವರಾರನ್ನೂ ಪೋಸ್ಟ್ ಮಾಡಿಲ್ಲ. ಕಳೆದ ಭಾನುವಾರ ನಾನು ಕಲ್ಲೋನಹಳ್ಳಿಗೆ ಹೋಗಿದ್ದೆ. ಅಲ್ಲಿ ೨೦ ಮಕ್ಕಳು ಸತ್ತು ಹೋಗಿದ್ದಾರೆ. ಅದಕ್ಕೆ ಏನು ಕಾರಣ ಅಂದರೆ "ಮೊಸೆಲ್ಸ್" ಆ ಹಳ್ಳಿಯ ಎಲ್ಲಾ ಮಕ್ಕಳನ್ನೂ ಈಗ ತುಮಕೂರಿನಲ್ಲಿ ತಂದು ಇಟ್ಟುಕೊಂಡಿದ್ದಾರೆ. ಆ ಮಕ್ಕಳ ಕೈ, ಕಾಲು ಕಡ್ಡಿ ಇದ್ದ ಹಾಗೆ ಇದೆ ಎಂತಹ ನ್ಯೂಟ್ರಿಷನ್ ಆಹಾರ ಇಲ್ಲದೆ ಇರುವಂತಹ ಮಕ್ಕಳು ಅಲ್ಲಿದ್ದಾರೆ. ಅಲ್ಲಿಯ ಜನರೂ ಕೂಡ ಡಾಕ್ಟರ್ ಬಂದಾಗ ಸಹಾಯ ಮಾಡಿಲ್ಲ. ಅಲ್ಲಿಯ ಜನರು ಮೂಢ ನಂಬಿಕೆಯುಳ್ಳವರು. ಅಮ್ಮ ಬಂದಿದ್ದಾಗ ಡಾಕ್ಟರ್ಸ್‌ಗೆ ಹೇಳಬಾರದು ? ಎಂದು ಮುಚ್ಚಿಟ್ಟುಕೊಂಡಿದ್ದಾರೆ. ದಡಾರ್ ಬಂದರೆ ಯಾರೂ ಸಾಯುವುದಿಲ್ಲ. ಆದರೆ ಅದನ್ನು ತಡೆದು ಕೊಳ್ಳುವಂತಹ ಶಕ್ತಿ ಇಲ್ಲದಿದ್ದಾಗ ಬೇದಿಯಾಗುತ್ತದೆ. ಲಂಗ್ಸ್ ನಿಂತು ಹೋಗಿ ಮಕ್ಕಳು ಸತ್ತಿದ್ದಾರೆ. ಆ ಮಕ್ಕಳಿಗೆ ಇದನ್ನು ರೆಸಿಸ್ಟ್ ಮಾಡುವುದಕ್ಕೆ ಶಕ್ತಿ ಇಲ್ಲ. ಆ ಶಕ್ತಿ ಇಲ್ಲದ ಮಕ್ಕಳನ್ನು ಯಾರೂ ಹೋಗಿ ನೋಡಿಲ್ಲ. ಡಿ.ಎಚ್.ಓ. ನೋಡಿದ್ದಾರೆ, ಡಾಕ್ಟರ್ ನೋಡಿದ್ದಾರೆ. ಯಾವ ರೀತಿ ನ್ಯೂಟ್ರಿಷನ್ ಫುಡ್ ಕೊಡಬೇಕೆಂದು ಅವರಿಗೆ ಜ್ಞಾನೋದಯ ಆಗಿಲ್ಲ. ಮಂತ್ರಿಗಳಿಗೆ ಇದು ಗೊತ್ತಿಲ್ಲ. ನಮ್ಮ ದೇಶದಲ್ಲಿ ಏನಾಗಿದೆ ಎಂದರೆ, ನಮ್ಮ ಊರುಗಳಲ್ಲಿ ಮಕ್ಕಳು ಜಾಸ್ತಿ. ಆದ್ದರಿಂದ ಆ ಮಕ್ಕಳ ಪ್ರಾಣಕ್ಕೆ ಬೆಲೆ ಇಲ್ಲ. ನಮ್ಮಲ್ಲಿ ಜನರು ಜಾಸ್ತಿ ಇದ್ದಾರೆ. ಆದ್ದರಿಂದ ಜನರ ಪ್ರಾಣಕ್ಕೆ ಬೆಲೆ ಇಲ್ಲದೇ ದಂಧವಸ್ಥೆಯಾಗಿದೆ. ಆ ಮಕ್ಕಳಿಗೆ, ಕಡ್ಲೆ, ಹೆಸರುಕಾಳು, ರಾಗಿ ಅವಿಲ್ಲ ಅಥವಾ ಗಂಜಿ ಕೊಟ್ಟರೆ ಚನ್ನಾಗಾಗುತ್ತಾರೆ. ಅದನ್ನು ಯಾರೂ ಮಾಡುವುದಿಲ್ಲ. ಯಾರೊಬ್ಬರನ್ನು ಕೇಳಿದರೂ ಆ ಡಾಕ್ಟರು ಒಳ್ಳೆಯವರು ಎಂದು ಹೇಳುತ್ತಾರೆ. ಕರೆದಲ್ಲಿಗೆ ಬಂದು ಚಿಕಿತ್ಸೆ ಕೊಡುತ್ತಾರೆಂದು ಹೇಳುತ್ತಾರೆ. ಅಂತಹ ಒಳ್ಳೆಯ ಡಾಕ್ಟರನ್ನು ಇವರು ಸಸ್ಪೆಂಡ್ ಮಾಡುವುದು. ಎತ್ತು ಈಯಿತೆಂದರೆ ಕೊಟ್ಟಿಗೆಗೆ ಕಟ್ಟು ಎಂದ ಹಾಗೆ ಇವರು ಮಾಡುವುದು. ಪಾಪ, ಆ ಡಾಕ್ಟರು ಪ್ರೊಬೆಷನರಿ ಇದ್ದಾರೆ. ಅಂತಹವರಿಗೆ ಸಸ್ಪೆಂಡ್ ಮಾಡುವುದು ಸರಿಯೇ ? ಆತ ಏನು ತಪ್ಪು ಮಾಡಿಲ್ಲ. ನಾನು ಅಲ್ಲಿನ ಒಬ್ಬೊಬ್ಬರನ್ನೂ ವಿಚಾರಿಸಿದ್ದೇನೆ. ಡಾಕ್ಟರದ್ದು ಏನೂ ತಪ್ಪು ಇಲ್ಲ, ಎಲ್ಲಾ ನಮ್ಮದೇ ತಪ್ಪು ನಮ್ಮ ತಪ್ಪನ್ನು ನಾವೇ ಮುಚ್ಚಿಕೊಂಡೆವು ಎನ್ನುತ್ತಾರೆ. ಅಲ್ಲಿ ಅವರಿಗೆ ಊಟಕ್ಕೆ ಗತಿ ಇಲ್ಲ. ಇಪತ್ತಿನವರೆಗೆ ಯಾರಿಗೂ ಅಲ್ಲಿ ಕೆಲಸ ಕೊಟ್ಟಿಲ್ಲ. ಬೆಳಿಯಿಲ್ಲದ್ದರಿಂದ ಹೊಟ್ಟೆಗೆ ಹಿಟ್ಟಿಲ್ಲ. ಅಲ್ಲಿ ಇಪತ್ತಿನವರೆಗೆ ಕೆಲಸ ಕೊಟ್ಟಿಲ್ಲ. ಈ ರೀತಿ ನಡೆಯುತ್ತಿದೆ ಪೋಲೇನಹಳ್ಳಿ ಸಮಾಚಾರ, ಅಲ್ಲಿನ ಡಾಕ್ಟರ್ ಸಸ್ಪೆಂಡ್ ಮಾಡುವುದು ಸರಿಯೇ ? ಈ ಬಗ್ಗೆ ಡಿ.ಎಚ್.ಓ. ಕೇಳಿದರೆ ಜಡ್.ಪಿ. ಕೇಳಿ ಎನ್ನುತ್ತಾರೆ. ಅಲ್ಲಿ ಕೇಳಿದರೆ ಇಲ್ಲಿ ಕೇಳಿ ಎನ್ನುತ್ತಾರೆ. ಆ ಜಡ್.ಪಿ.ಗಳಲ್ಲಿ ಆಗಿರುವ ಅವ್ಯವಸ್ಥೆಗಳನ್ನು ಹೇಳುವುದಕ್ಕಾಗುವುದಿಲ್ಲ ಯಾವುದನ್ನು ಜಡ್.ಪಿ.ಗೆ ಕೇಳಿದರೂ ಮಂಡಲ್ ಪಂಚಾಯಿತ್‌ಗೆ ಕೇಳಿ ಎನ್ನುತ್ತಾರೆ. ಅಲ್ಲಿ ಒಂದೊಂದು ಇಲಾಖೆಗೆ ಇವರಿಗೂ ಸರಿಯಾದ ಹೊಂದಾಣಿಕೆ ಇಲ್ಲ. ಎಲ್ಲಾ ಕಡೆ ಅವ್ಯವಸ್ಥೆ ಆಗಿದೆ. ನಾಳೆ ದಿವಸ ಮಾನ್ಯ ಆರೋಗ್ಯ ಮಂತ್ರಿಗಳು ಈ ಬಗ್ಗೆ ಹೇಳಬೇಕಾಗುತ್ತದೆ. ಎಲ್ಲಾ ಕಡೆ ಔಷಧಿಗಳನ್ನು ಆರೋಗ್ಯಕ್ಕೆ ಬೇಕಾಗಿರತಕ್ಕ ಫುಡ್‌ನ್ನು ಕೊಡಿಸುವುದಕ್ಕೆ ವಿಪರ್ವಾಡು ಮಾಡಬೇಕೆಂದು ಹೇಳುತ್ತೇನೆ. ಇನ್ನು ತಿರುನೇ ಡಿಮಾಂಡ್ ಅರ್ಬನ್ ಡೆವಲಪ್‌ಮೆಂಟ್‌ಗೆ ಸೇರಿದ್ದು. ಇವರು ಸಂಕೇಶ್ವರಕ್ಕೆ, ತುಮಕೂರಿಗೆ ಮತ್ತು ಕೆಲವು ಕಡೆ ಸ್ವಲ್ಪ ವ್ಯವಸ್ಥೆ ಮಾಡಿದ್ದಾರೆ. ಆದರೆ ಬೀದರ್, ಜಮಖಂಡಿ, ಚಿಕ್ಕೋಡಿ ಬಿಜಾಪುರ ಗುಲ್ಬರ್ಗ, ರಾಯಭಾಗ, ಖಾನಾಪುರ ಮುಂತಾದ ಕಡೆಗಳಲ್ಲಿ ಸಮಸ್ಯೆ ಇದ್ದೇ ಇದೆ. ಅಲ್ಲಿ ಏನು ವ್ಯವಸ್ಥೆಯನ್ನು ಮಾಡಿದ್ದೀರಿ ? ನಾನು ಅಲ್ಲೆಲ್ಲಾ ಹೋಗಿ ಬಂದು ಮುಖ್ಯ ಮಂತ್ರಿಗಳಿಗೆ ಒಂದು ಸವಿವರವಾದ ಪತ್ರವನ್ನು ಬರೆದಿದ್ದೇನೆ. ಇವತ್ತು ರಾಯಭಾಗದಲ್ಲಿ ೨೦ ಲಕ್ಷ ಹಣ ಇಟ್ಟುಕೊಂಡಿದ್ದಾರೆ. ಆದರೆ ಅಲ್ಲಿ ಕೆಲಸ ಮಾಡುತ್ತಾ ಇಲ್ಲ. ವಾಟರ್ ಸಪ್ಲೈ ಬೋರ್ಡ್‌ನವರು ಏನು ಕೆಲಸ ಮಾಡುತ್ತಿದ್ದಾರೆ ? ಹಣ ಇದ್ದರೂ ಚಿತ್ರದುರ್ಗದಲ್ಲಿ ಒಳಚರಂಡಿ ಕೆಲಸ ಮಾಡುತ್ತಾ ಇಲ್ಲ. ಮತ್ತೆ ಕೆಲವು ನಗರಸಭೆಗಳಿಗೆ ಆಕ್ಟ್ರಾಯ್ ರೀಇಂಬರ್ಸ್‌ಮೆಂಟ್ ಕೊಟ್ಟಿಲ್ಲ. ಇದರಿಂದ ಅಲ್ಲಿ ಕೆಲಸ ಮಾಡಲು ಆಗುತ್ತಾ ಇಲ್ಲ.

ದಂಡ್ಡಿ ಇಲ್ಲದೇ ಬರೀ ಕೈಯ್ಯಲ್ಲಿ ಮಂಳೆ ಹೊಡೆಯಬೇಕೆಂದರೆ ಆದು ಆಗುವ ಕೆಲಸ ಅಲ್ಲ. ದಯವಮಾಡಿ ನೀವು ಅಕ್ಟ್ಯೂಯ್ ಕಾಂಪೆನ್‌ಸೇಷನ್ ಕೊಡುವುದಕ್ಕೆ ವ್ಯವಸ್ಥೆ ಮಾಡಿ. ಇನ್ನು ಅನೇಕ ಕಡೆ ಪೌರಕಾರ್ಮಿಕರಿಗೆ ಸಂಬಳ ಕೊಟ್ಟಿಲ್ಲ. ಅವರಿಗೆ ಮನೆ ಮಠ ಇಲ್ಲವೆ ? ಅವರಿಗೆ ಸಂಸಾರ ಇಲ್ಲವೇ ? ಅವರುಗಳು ಏನು ಕಳ್ಳತನ ಮಾಡಬೇಕೇ ? ಜೀವನವನ್ನು ಹೇಗೆ ಸಾಗಿಸಬೇಕು ? ಅವರಿಗೆ ಸಂಬಳ ಕೋಡದೇ ಹೋದರೆ ಅವರು ಜೀವನ ನಡೆಸುವುದು ಹೇಗೆ ? ಇವತ್ತು ತಾವು ಬೇಡದೇ ಇರುವುದಕ್ಕೆ ಕೋಟಿಗಟ್ಟಲೆ ಹಣವನ್ನು ಏಕೆ ಖರ್ಚು ಮಾಡಬೇಕಾಗಿತ್ತು ?

ಇಷ್ಟಬಂದಹಾಗೆ ಅದಕ್ಕೆ ಕೊಡುತ್ತೇವೆ, ಇದಕ್ಕೆ ಕೊಡುತ್ತೇವೆಂದು ಎಲ್ಲಾ ತರಹದ ಪೆನ್‌ಷನ್‌ಗಳು ಅವಲಕ್ಷಣದ ಪೆನ್‌ಷನ್‌ಗಳು. ಯಾವುದಕ್ಕೆ ಕೊಡಬೇಕೋ ಅದಕ್ಕೆ ಕೊಡಲಿಲ್ಲ, ಅದೆಲ್ಲ ಅವಲಕ್ಷಣವಾಗಿದೆ. ವೈನರ್ ಇರಿಗೇಷನ್ ಪಿಳನೇ ಡಿಪ್ಯಾಂಡ್‌ನಲ್ಲಿ ಯಾವ ತರಹದ ಕೆಲಸ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿಲ್ಲ. ಎನ್‌ಆರ್‌ಇಪಿ, ಡಿಪಿಎಪಿ, ಆರ್‌ಎಲ್‌ಇಜಿಪಿ ಈ ತರಹ ಸೆಂಟ್ರಲ್ ಗೌರ್ನಮೆಂಟ್ ಸ್ಕೀಮ್‌ಗಳು ಏನಿವೆ ಅವುಗಳ ಕೆಲಸ ಮಾತ್ರ ನಡೆಯುತ್ತಿದೆಯೇ ಹೊರತು ನಮ್ಮ ಸರ್ಕಾರದ ಹಣದಿಂದ ಯಾವುದೇ ಕೆಲಸ ನಡೆಯುತ್ತಿಲ್ಲ. ಅದನ್ನು ತಮ್ಮ ಗಮನಕ್ಕೆ ತರುವುದಾದರೆ ಲಿಫ್ಟ್ ಇರಿಗೇಷನ್ ಸ್ಕೀಮ್‌ನಲ್ಲಿ ಕಡೆಯ ಪಕ್ಷ ಅರ್ಧಕರ್ಧ ಫೇಲ್ಯುರ್ ಆಗಿದೆ. ಮೊದಲಿನಿಂದ ಕೊನೆಯವರೆಗೆ ನೀರು ಕೊಡದಿದ್ದರೂ ಅವರಿಂದ ಕರವನ್ನು ವಸೂಲಿ ಮಾಡುತ್ತಿದ್ದಾರೆ. ಕಂಟ್ರಾಕ್ಟರುಗಳ ಗೋಳು, ಏನೆಂದರೆ ಅವರು ನಮಗೆ ಬಿಲ್ ಕೊಟ್ಟಿಲ್ಲವೆಂದು ಗೋಳಿಡುತ್ತಿದ್ದಾರೆ. ಇಷರು ವರ್ಕ್ಸ್ ಕೊಡುವಾಗಲೂ ಕೂಡ ರಾಜಕೀಯ. ವಿಧಾನ ಸೌಧದಿಂದ ಒಂದು ಚೀಟಿಯನ್ನು ತೆಗೆದುಕೊಂಡು ಹೋದರೆ ಅವರಿಗೆ ೨೦ ಲಕ್ಷ ರೂಪಾಯಿಗಳ ಕೆಲಸ ಈ ತಮಾಷೆಯನ್ನು ಕೇಳಿದ್ದೀರೇನು? ಚೀಟಿ ಹೋದರೆ ೨೦ ಲಕ್ಷ ರೂಪಾಯಿಗಳ ಕೆಲಸ, ನಾಲಕ್ಕು ಜನ ರೆಡ್ಡಿಗಳಿಗೆ ಈ ತರಹ ಕೆಲಸ ಕೊಟ್ಟಿದ್ದಾರೆ. ೨೦ ಲಕ್ಷ ರೂಪಾಯಿ ವರ್ಕ್ ಅಲಾಟ್‌ಮೆಂಟ್, ಎಲ್ಲದಕ್ಕೂ ರಾಜಕೀಯ. ರಾಜಕೀಯ, ರಾಜಕೀಯ ಅಂದರೆ ಇಷ್ಟೊಂದು ರಾಜಕೀಯ ಮಾಡಿದರೆ ಇದು ಕಷ್ಟವಾಗುತ್ತದೆ. ಎಲ್ಲಾ ಕಾಲಕ್ಕೂ ಯಾರಾದರೊ ಒಬ್ಬರೇ ರಾಜ್ಯಭಾರ ನಡೆಸುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.—ರಾಜಕೀಯ ಮಾಡದಹಾಗೆ ಏನಾದರೂ ಸಲಹೆ ಮಾಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೇಳುತ್ತೇನೆ ಕಂಳಿತುಕೊಳ್ಳಿ.

ಅಧ್ಯಕ್ಷರು.—ಮಾನ್ಯ ಸದಸ್ಯರು ನಿಯಮ ೩೦೪ ಅನ್ನು ಓದಿಕೊಳ್ಳಬೇಕು. ನಿಯಮ ಏನು ಹೇಳುತ್ತದೆ ಅಂದರೆ.—

> "ಅಧ್ಯಕ್ಷರಿಂದ ಕರೆ ಬಂದಾಗ ಸದಸ್ಯರು ಮಾತನಾಡುವುದು, ಒಬ್ಬ ಸದಸ್ಯನು ಮಾತನಾಡಲು ಎದ್ದು ನಿಂತರೆ, ಅಧ್ಯಕ್ಷರು ಆವರ ಹೆಸರನ್ನು ಕರೆಯತಕ್ಕದ್ದು. ಒಬ್ಬರಿಗಿಂತ ಹೆಚ್ಚು ಸದಸ್ಯರು ಏಕ ಕಾಲದಲ್ಲಿ ಎದ್ದು ನಿಂತರೆ, ಅಧ್ಯಕ್ಷರು ಹೆಸರು ಕರೆದಿರುವ ಸದಸ್ಯರಿಗೆ ಮಾತನಾಡಲು ಹಕ್ಕಿರುವುದು".

ಆವರನ್ನು ಕರೆದಿದ್ದೇನೆ ಅವರು ಮಾತನಾಡುತ್ತಿದ್ದಾರೆ.

SMT. K. S. NAGARATHNAMMA.—Demand No. 35 is related to Irrigation, Navigation, Drainage and Flood Control Projects. Demand No. 46 is related to Roads and Bridges. In the Explanatory Note of Demand No. 35 it is stated as follows.—

> "In order to expedite irrigation works, the existing Tungabhadra project zone Munirabad has been bifurcated. The existing zone is redesignated as Thungabhadra project Irrigation Central Zone Munirabad and a new Zone viz., Irrigation project zone has been created with one new circle, 4 new divisions and 16 new sub-divisions. A sum of Rs. 126.25 lakhs is required for this purpose. The expenditure constitutes "New Service" and this amount could be found

by savings and hence only taken sums are included. This amount includes Rs. 31.32 lakhs released from "Contingency Fund."

Item No. 3.—With a view to complete the canal works of Hemavathi project, a new zone viz., Hemavathi Canal Zone, Tumkur has been created. This zone consists of among others, Chief Engineer's office at Tumkur. No provision exists for this office. A sum of Rs. 34.35 lakhs is the anticipated expenditure. As this amount could be found by savings only a token sum is included.

Item No. 11.—The Teetha Project is complete in all respect. But a sum of Rs. 8.00 lakhs is required for payment of land compensation and other miscellaneous expenditure. This is a New Service item. As this amount could be found by reappropriation of savings, only a token sum is included.

Item No. 12.—A sum of Rs. 7.51 lakhs is required for payment of land compensation for the project. As this amount could be found out of savings, token sum is included." ಸೇವಿಂಗ್ಸ್ ಎಂದು ಇಷ್ಟೊಂದು ಹಣ ಹಾಕಿದ್ದಾರೆ ಅದು ಎಲ್ಲಿಂದ ಬರುತ್ತದೆ? ಇವರು ಖರ್ಚು ಮಾಡುವುದಕ್ಕೆ ಹಣವಿಲ್ಲ. ಸೇವಿಂಗ್ಸ್ ಎಲ್ಲಿಂದ ಬರುತ್ತದೆ? ಇದೇನು ಪ್ಲಾನಿಂಗೇ? Is it a very good planning? ಇನ್ನೊಂದು ದೊಡ್ಡ ಪ್ರಶ್ನೆ, ಹಾಗೆಯೇ ರೋಡ್ ವಿಚಾರದಲ್ಲಿಯೂ ಆಯ್ತು. ನಾನು ಇನ್ನು ಸ್ವಲ್ಪ ಮಾತನಾಡುತ್ತೇನೆ, ನಾಳೆ ಮಾತನಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಪೂರಕ ಬೇಡಿಕೆಗಳ ಮೇಲೆ ಬೇರೆ ಸದಸ್ಯರು ಮಾತನಾಡುವುದು ಇದ್ದರೆ ಮಾತನಾಡಲಿ.

ಅಧ್ಯಕ್ಷರು.—ಅವರು ಇನ್ನು ಸ್ವಲ್ಪ ಮಾತನಾಡುತ್ತೇನೆ, ನಾಳೆ ಮಾತನಾಡುತ್ತೇನೆಂದು ಹೇಳುತ್ತಿದ್ದಾರೆ.

ಜೆ-00 ಪಿ.ಎಂ.

ಶ್ರೀ ಎ. ಲಕ್ಷ್ಮೀಸಾಗರ್.—ಬೇರೆ ಸದಸ್ಯರು ಮಾತನಾಡುವವರು ಇದ್ದರೆ ಮಾತನಾಡಲಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ನಾಳೆ ಮಾತನಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಕೃಷಿ ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಇದ್ದಾರೆ. ಕೆಲವು ಸಣ್ಣ ವಿಧೇಯಕಗಳು ಪರಿಷತ್ತಿನಿಂದ ತಂಗೀಕೃತವಾಗಿ ಬಂದಿದೆ. ಸಣ್ಣ ಸಣ್ಣ ತಿದ್ದುಪಡಿ ಇದೆ.....

ಶ್ರೀ ಬಿ. ಬಸವಲಿಂಗಪ್ಪ.—ವಿರೋಧ ಪಕ್ಷದ ನಾಯಕಿಯವರು ಮಾತನಾಡುತ್ತಿದ್ದರು. ಅದನ್ನು ಮೊಟಕು ಮಾಡಿಬಿಟ್ಟು ಕರಡಿ ಬಿಟ್ಟರು ಎನ್ನುವ ಹಾಗೆ.....

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದಕ್ಕೆ ಅಷ್ಟು ಆರ್ಜೆಂಟ್ ಮಾಡುವುದಂ ಏತಕ್ಕೆ? ಇದನ್ನು ನಾಳೆ ತೆಗೆದುಕೊಳ್ಳಬಹುದಲ್ಲ.

ಅಧ್ಯಕ್ಷರು.—ಅದನ್ನು ತೆಗೆದುಕೊಂಡರೆ ಎರಡು ಮಿನಿಟ್ ಹಿಡಿಯುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಅವರ ಪ್ರಶ್ನೆಯನ್ನು ನೀವು ಏತಕ್ಕೆ ಕೇಳುತ್ತೀರಿ? She is on her legs. Let her complete...

ಅಧ್ಯಕ್ಷರು.—ವಿರೋಧ ಪಕ್ಷದ ನಾಯಕಿಯವರು ನಾಳೆ ಕಂಟಿನ್ಯೂ ಮಾಡುತ್ತೇನೆ ಎಂದು ಹೇಳಿದರು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನನಗೆ ಸಾಕಾಯಿತೆಂ ಎಂದೇನೂ ಅಲ್ಲ. ಸಾಕು ಎಂದರೆ ಹೌಸ್ ಮುಂಗಿಯಿತ್ತದೆ ಎಂದು ತಿಳಿದುಕೊಂಡು ನಾಳೆ ಕಂಟಿನ್ಯೂ ಮಾಡುತ್ತೇನೆ ಎಂದು ಹೇಳಿದ್ದುದು. ಸಂಸ್ಕೃ ಆಯಿತು ಎಂದೇನೂ ಅಲ್ಲ. ನಮ್ಮನ್ನು ಕೂರಿಸಿ ಬೇರೆಯದನ್ನು ಮುಂದುವರಿಸುವುದು ಅಂದರೆ ಏನು ? ನಾನು ಮಾತನಾಡಿದರೆ ಏನು ?

ಶ್ರೀ ಎ. ಲಕ್ಷ್ಮೀಸಾಗರ್.—ಐದು ಗಂಟೆಗೆ ಈ ಸಭೆಯ ಕಾರ್ಯಕಲಾಪಗಳನ್ನು ಮುಂಗಿಸಿಬಿಡಬೇಕು ಎಂದು ಇಲ್ಲ,

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಂಥ ಆರ್ಜೆಂಟ್ ನಿಮಗೆ ಏನು ಇದೆ ?

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಸಾಯಂಕಿಯವರು ಹೇಳಿದ್ದಾರೆ, ೫ ಗಂಟೆಯ ಮೇಲೆ ಇರುವುದಿಲ್ಲ ಎಂದು. ನಾನು ಇದರ ಬಗ್ಗೆ ಪ್ರಸ್ತಾಪ ಮಾಡುತ್ತಿಲ್ಲ. ನನ್ನ ಮನವಿ ಇಷ್ಟೆ. ೧೨ ಗಂಟೆಯಿಂದ ೫ ಗಂಟೆಯವರೆಗೂ ಸಭೆಯ ಕಾರ್ಯಕಲಾಪಗಳನ್ನು ನಡೆಸಬೇಕು ಎಂದೂ ಇರುವುದೂ ನಿಜ. ಆದರೆ ಅನುಭವದಲ್ಲಿ ಮತ್ತು ಕಾರ್ಯರೂಪದಲ್ಲಿ ನಾವು ಐದೂ ಗಂಟೆಯ ನಂತರವೂ ಕೂತಿದ್ದೇವೆ. ಪಾರ್ಲಿಮೆಂಟ್‌ನಲ್ಲೂ ಇದೇ ಪರಿಪಾಠ ನಡೆಯುತ್ತಿದೆ. ರಾತ್ರಿ ೮ ಗಂಟೆ, ಹತ್ತು ಗಂಟೆಯವರೆಗೂ ಕಾರ್ಯಕಲಾಪಗಳು ನಡೆದಿರತಕ್ಕಂಥ ಉದಾಹರಣೆಗಳೂ ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಅವರ ಭಾಷಣ ಯಾರಿಗೆ ?

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ನಮಗೆ ಏನು ಬುದ್ಧಿವಾದ ಹೇಳುವುದು ?

ಅಧ್ಯಕ್ಷರು.—ಅವರು ಏನು ಹೇಳಂತ್ತಾರೋ ಸ್ವಲ್ಪ ಕೇಳೋಣ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಯಾರಿಗೂ ಬುದ್ಧಿವಾದ ಹೇಳುತ್ತಿಲ್ಲ. ಆದರೆ ಈ ಸಭೆಯ ಕಾರ್ಯಕಲಾಪಗಳನ್ನು ಗಮನದಲ್ಲಿಟ್ಟುಕೊಂಡು ಈ ಸಭೆಯ ಕಾರ್ಯಕಲಾಪಗಳು ಈ ದಿನದ ಪಟ್ಟಿಯಲ್ಲಿ ಸೇರಿಲ್ಲದಂತಹ ತಿದ್ದುಪಡಿಗಳು ವಿಧಾನ ಪರಿಷತ್ತಿನಲ್ಲಿ ಅಂಗೀಕಾರವಾಗಿ ಬಂದಿದೆ. ಅವುಗಳನ್ನು ಪರಿಗಣಿಸಬಹುದಲ್ಲ ಎಂದು ನಾನು ಮನವಿ ಸಲ್ಲಿಸುತ್ತಿದ್ದೇನೆ. ಐದೂ ಗಂಟೆಗೆ ಏಳಬೇಕೂ ಎಂದೂ ಎದ್ದು ಹೋಗತಕ್ಕಂಥದ್ದು ಸರಿ. ಕಾರ್ಯಕಲಾಪಗಳ ಗೌರವ ದೃಷ್ಟಿಯಿಂದ ಎರಡೂ ಮೂರು ವಿಧೇಯಕಗಳನ್ನು ಅಂಗೀಕರಿಸಬಹುದಲ್ಲ ಎಂದು ನಾನು ಹೇಳುತ್ತಿದ್ದೇನೆ. ಸರ್ಕಾರದ ಪರವಾಗಿ ಕಾರ್ಯ ಗೌರವದಿಂದ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸಬೇಕು ಎಂದೂ ನಾನು ಹೇಳುತ್ತಿದ್ದೇನೆ. ನಾನು ಯಾರಿಗೂ ಬುದ್ಧಿವಾದ ಹೇಳುತ್ತಿಲ್ಲ.

(ಗೊಂದಲ)

SRI B. BASAVALINGAPPA.—Why he is trying to interrupt our Leader.....

(Interruption)

SRI A. LAKSHMISAGAR.—I am not saying that He does not know what has happened in the House, Hon'ble Leader of the Opposition made her submission and said for the day I have done. Tomorrow I will continue my speech...

SRI B. BASAVALINGAPPA.—What is your business then ?

SRI A. LAKSHMISAGAR.— This is my business which has constitutionally devolved upon me. I am trying to draw the attention of the Hon'ble Speaker. I am entitled to do it. Nobody shall object...

SRI B. BASAVALINGAPPA.—We have to contribute our thoughts....
ಶ್ರೀ ಎಂ. ಎಸ್. ಕೃಷ್ಣನ್.—ಹತ್ತು ಸಾವಿರ ಜನ ಉಪಾಧ್ಯಾಯರು ಉಪವಾಸ ಮಾಡುತ್ತಿದ್ದಾರೆ. ಇದರ ಬಗ್ಗೆ ಅರ್ಧ ಗಂಟೆ ಚರ್ಚೆ ಆಗಬೇಕೆಂದು ಹೇಳಿದರೆ ಆಗುವುದಿಲ್ಲವೆಂದು ಹೇಳಿದರು. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ.....

ಶ್ರೀ ಎ. ಲಕ್ಷ್ಮೀಸಾಗರ್.—ಅದಕ್ಕೆ ನಾನು ಅಡ್ಡಿ ಬರುತ್ತಿಲ್ಲ.

ಅಧ್ಯಕ್ಷರು.—ಶ್ರೀ ಕೃಷ್ಣನ್‌ರವರೇ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಿಮ್ಮದನ್ನು ನಾಳೆ ತೆಗೆದುಕೊಳ್ಳಬೇಕೆಂದು ಆಗಿದೆ. ಈಗ ಅರ್ಧಗಂಟೆ ಚರ್ಚೆ ಬೇರೆ ಇದೆ. ಇವರದ್ದು ಸಿಂಪಲ್ ಬಿಲ್ಸ್ ಇವೆ.

ಶ್ರೀ ಎಂ. ಎಸ್. ಕೃಷ್ಣನ್.—ಹಾಗಾದರೆ ನಾಳೆ ತೆಗೆದುಕೊಳ್ಳಲಾಗುವುದು ಎಂದು ಏಕೆ ಹೇಳಿದ್ದು ? ಇವತ್ತು ಐದು ಗಂಟೆಗೆ ಸಭೆ ಮುಗಿಯಬೇಕು ಎಂದು ವಿರೋಧ ಪಕ್ಷದ ನಾಯಕಿಯವರು ಹೇಳಿದ್ದಾರೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಬಿಲ್ಲನ್ನು ಇಂಟರ್‌ಡ್ಯೂಸ್ ಮಾಡಲಿ. ವಿರೋಧ ಪಕ್ಷದ ನಾಯಕರು ನಾಳೆ ತಮ್ಮ ವ್ಯಾಖ್ಯಾನವನ್ನು ಮುಂದುವರೆಸುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇಲ್ಲ ಇಲ್ಲ. ಅದು ಹಾಗಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನು ನಡೆಯಿಂತೋ ಅದರ ಪ್ರಕಾರವೇ ನಡೆಯಬೇಕು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಬಿಲ್ಲನ್ನು ಮಂಡವೆ ಮಾಡುವುದಕ್ಕೆ ನಿಂತಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ನಾಳೆ ಮಾಡುತ್ತಾರೆ.

MR. SPEAKER.—I have to go according to the decision of the House. ನಾನು ಸಭೆಯ ಅಭಿಪ್ರಾಯ ಪಡೆದು ಸಭೆಯನ್ನು ನಡೆಸಬೇಕಾಗುತ್ತದೆ. ಈಗ ಡಿಸ್‌ಕಶನ್ ಇಲ್ಲ. ಬರೀ ಇಂಟ್ರಡಕ್ಷನ್.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಇವತ್ತು ಮುಂಡನೆ ಆಗುತ್ತದೆ. ಕನ್ಸಿಡರೇಶನ್‌ಗೆ ನಾಳೆ ಬರುತ್ತದೆ. ಅದೂ ಕೂಡ ಬೇಡ ಎಂದರೆ ಏನು ಮಾಡಬೇಕು ?

ಶ್ರೀ ಎಸ್. ಬಂಗಾರಪ್ಪ.—ಬಿಡಿ, ನಾಳೆ ಮಾಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇವತ್ತೆ ಏಕೆ ಬರಬೇಕು ?

ಶ್ರೀ ಎ. ಲಕ್ಷ್ಮೀಸಾಗರ್.—ಒಂದು ನಿಮಿಷದಲ್ಲೇ ಆಗಿಬಿಡುತ್ತದೆ.

ಅಧ್ಯಕ್ಷರು.—ನೋಡಿ ಬಂಗಾರಪ್ಪನವರೇ.....

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಲಕ್ಷ್ಮೀಸಾಗರ್ ಅವರೇ ಒಂದು ನಿಮಿಷ. ನೀವು ಕುಳಿತು ಕೊಳ್ಳಬೇಕು. ಮಾನ್ಯ ಅಧ್ಯಕ್ಷರೇ, ಈಗ ಸದನದ ಕಾರ್ಯಕಲಾಪಗಳ ಸಮಿತಿಯು ಮೂರುವರೆ ಗಂಟೆಗೆ ಸಭೆ ಸೇರಿ ತೀರ್ಮಾನ ಮಾಡಿದ್ದೀರಿ. ತೀರ್ಮಾನ ಮಾಡಿದ ಮೇಲೆ, ಬೇರೆ ತೀರ್ಮಾನಗಳು ಏನೂ ನಡೆದಿವೆ ಎಂಬುದನ್ನು ಸದನದ ಮುಂದಿಡಿ. ಆಮೇಲೆ ಈ ದಿವಸ ಅಡಿಶನಲ್ ಅಜೆಂಡಾ ಪ್ರಕಾರ ಏನು ಸರ್ಕ್ಯುಲೇಟ್ ಮಾಡಿದ್ದಾರೆ, ಅದರ ಪ್ರಕಾರ ಕೆಲವು ಬಿಲ್ಸನ್ನು ಇಲ್ಲಿ.....

ಶ್ರೀ ಎ. ಲಕ್ಷ್ಮೀಸಾಗರ್.—ಇಷ್ಟು ಹೊತ್ತಿಗೆ ಆಗಿ ಹೋಗುತ್ತಿತ್ತು. ಬರೀ ಇಂಟ್ರಡಕ್ಷನ್ ಅಷ್ಟೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಲಕ್ಷ್ಮೀಸಾಗರ್ ಅವರೇ, ಇದು ಒಂದೇ ಅಲ್ಲ. ಬರೀ ಇಂಟ್ರಡಕ್ಷನ್ ಮಾಡತಕ್ಕಂಥಾದ್ದು ವಿಚಾರ ಒಂದೇ ಅಲ್ಲ. ಹಲವಾರು ವಿಚಾರಗಳು ಸಂಬಂಧ

ಪಟ್ಟಹಾಗೆ ಇರುತ್ತವೆ. ಇದೇನೂ ಮೊದಲ ಬಾರಿಗೆ ಬರತಕ್ಕದ್ದು ಅಲ್ಲ. ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗತಕ್ಕಂಥ ವಿಚಾರ ಇದೆ, ಬೇರೆ ಬಿಲ್ಲುಗಳು ಕೂಡ ಇವೆ.

ಅಧ್ಯಕ್ಷರು.—ಅರ್ಧ ಗಂಟೆ ಚರ್ಚೆ ಬೇರೆ ಇದೆ. ಕೃಷಿ ಮಂತ್ರಿಗಳು ಬರುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಬಿಲ್ ಇಂಟ್ರಡ್ಯೂಸ್ ಮಾಡಬಹುದು ಎಂದು ತೀರ್ಮಾನ ಆಗಿದೆಯೆ? ಅದು ಆಗಿಲ್ಲ. ಅದರ ಬದಲಿಗೆ ೫ ಗಂಟೆ ಆದ ಮೇಲೆ ಬೇರೆ ಕೆಲಸ ಇದೆ, ಅಡ್ಜರ್ನ್ ಮಾಡಿ ಎಂದು ವಿರೋಧ ಪಕ್ಷದ ನಾಯಕರು ಹೇಳಿದರು. ತಾವು ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿರಿ. ನೀವು ಒಪ್ಪಿಗೆ ಕೊಟ್ಟಮೇಲೆ, ಕಾಂಟ್ರಾಕ್ಟ್ ಶಿಕ್ಷಕರ ವಿಷಯ ಮಾತನಾಡುವುದಕ್ಕೆ ನಾಳೆ ಮಾತನಾಡಿ ಎಂದು ಹೇಳಿದ್ದೀರಿ. ಈಗ ಬಿಲ್ಲುಗಳನ್ನು ತೆಗೆದುಕೊಂಡು ಬಂದು, ಇಂಟ್ರಡ್ಯೂಸ್ ಮಾಡುತ್ತಿದ್ದೀರಿ. ಹಾಗಾದರೆ ಕಾಂಟ್ರಾಕ್ಟ್ ಶಿಕ್ಷಕರ ವಿಷಯವನ್ನು ತೆಗೆದುಕೊಳ್ಳಿ, ಉತ್ತರ ಕೊಡುವುದಕ್ಕೆ ಮಂತ್ರಿಗಳೂ ಇದ್ದಾರೆ.

ಪ್ರಕಟಣೆ

ಅಧ್ಯಕ್ಷರು.—ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ಇಂದು ಮಧ್ಯಾಹ್ನ ಸಭೆ ಸೇರಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಂಡಿತು.

ಬುಧವಾರ	(ಅ)	ಅನುಪೂರಕ ಅಂದಾಜುಗಳ ಮೇಲೆ ಚರ್ಚೆ ಮತ್ತು ಮತಕ್ಕೆ ಹಾಕುವುದು.
೯-೯-೧೯೮೭	(ಆ)	ಶಾಸನ ರಚನೆಯ ಕಾರ್ಯಕಲಾಪಗಳು,
	(ಇ)	ಧನ ವಿನಿಯೋಗ ವಿಧೇಯಕದ ಮಂಡನೆ ಮತ್ತು ಅಂಗೀಕಾರ.
	(ಈ)	ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಶಿಕ್ಷಕರು ಹಾಗೂ ಉಪನ್ಯಾಸಕರನ್ನು ಖಾಯಂಗೊಳಿಸುವ ಬಗ್ಗೆ ಅಲ್ಪಕಾಲಾವಧಿ ಚರ್ಚೆ.
ಗುರುವಾರ	(ಅ)	ಶಾಸನ ರಚನೆಯ ಕಾರ್ಯಕಲಾಪಗಳು ಹಾಗೂ ಶಾಸನಬದ್ಧ ನಿರ್ಣಯದ
೧೦-೯-೧೯೮೭		ಅಂಗೀಕಾರ.
	(ಆ)	ರಾಜ್ಯದಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರ ಮೇಲೆ ನಡೆಯುತ್ತಿರುವ ಹಲ್ಲೆಯನ್ನು ತಡೆಗಟ್ಟುವ ವಿಚಾರದ ಬಗ್ಗೆ ವಿಶೇಷ ಚರ್ಚೆ
	(ಇ)	೧೫ನೇ ನಿಯಮದ ಮೇರೆಗೆ ವಿದ್ಯುತ್ ತೆರಿಗೆ ಹೆಚ್ಚಳದ ಬಗ್ಗೆ ಪ್ರಸ್ತಾಪ.
ಶುಕ್ರವಾರ		ಶಾಸನ ರಚನೆಯ ಕಾರ್ಯಕಲಾಪಗಳು ಹಾಗೂ ಖಾಸಗಿ ಕಾರ್ಯಕಲಾಪಗಳು
೧೧-೯-೧೯೮೭		ಇಷ್ಟಿವೆ.

ಶ್ರೀ ಎಸ್. ಬಂಗಾರಪ್ಪ.—ಶಾಸನ ರಚನೆಗೆ ಸಂಬಂಧಪಟ್ಟಂತೆ ನಾಳೆ ಎಂದು ತೀರ್ಮಾನ ಮಾಡಿ ಟೈಮ್ ನಿಗದಿ ಮಾಡಿದ್ದೀರಿ. ಈ ಬಿಲ್ಲುಗಳನ್ನು ನಾಳೆ ತೆಗೆದುಕೊಳ್ಳಿ...

ಅಧ್ಯಕ್ಷರು.—ಆಯಿತು, ಒಪ್ಪಿದ್ದಾರೆ. ಈಗ ಮಾನ್ಯ ಕಾನಡಿಯವರು ಹೇಳಿದ ವಿಷಯದಲ್ಲಿ ''ಆದೇ ಜನರಿಗೆ ಈ ಮಂಲವನ್ನು ತಿನ್ನಿಸಿದ್ದರೆ ಹೌಸ್ ಕಮಿಟಿಯನ್ನು ಮಾಡುತ್ತಿದ್ದಿರಾ'' ''ಹರಿಜನರಿಗೆ ಮಂಲ ತಿನ್ನಿಸಿದ್ದಾರೆ'' ''ಹರಿಜನರಿಗೆ ನೀವು ರಕ್ಷಣೆ ಕೊಡಬೇಕಿತ್ತು'' ''ಮಂಲ ತಿನ್ನಿಸಿದ್ದೀರಿ ಎಂದಿದ್ದಕ್ಕೆ ನಿಮಗೆ ಇಷ್ಟು ಸಿಟ್ಟು ಬರುತ್ತದೆ'' ಇದನ್ನು ಎಕ್ಸ್‌ಪಂಜ್ ಮಾಡಿದ್ದೇನೆ. ಕ್ಷಮೆ ಕೇಳುವ ಬಗ್ಗೆ ಮತ್ತು ಕ್ರಮ ತೆಗೆದುಕೊಳ್ಳಬೇಕೋ, ಬಿಡಬೇಕೋ ಇದನ್ನು ನಾಳೆ ನೋಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಸಂತೋಷ. ಇದೇ ಜನರಿಗೆ ಅಂದರೆ ಹರಿಜನರಿಗೆ ಯಾರೂ ತಿನ್ನಿಸಿದ್ದಾರೆ, ಆ ಜನಕ್ಕೆ ಎಂದು ಹೇಳಿರುವುದು. ಇದು ಮಾನ್ಯ ಚಾಲಪ್ಪನವರಿಗೂ ಬರುವುದಿಲ್ಲ, ಅವರಿಗೂ ಸಂಬಂಧಪಡುವುದಿಲ್ಲ.

ಅಧ್ಯಕ್ಷರು.—ಒಂದುಕಡೆ ಹರಿಜನರಿಗೆ ಮಂಲ ತಿನ್ನಿಸಿದ್ದಾರೆ ಎಂದಿದೆ, ಮತ್ತೊಂದು ಕಡೆ ತಿನ್ನಿಸಿದ್ದೀರಿ ಎಂದಿದೆ. ಇದು ಸ್ವಲ್ಪ ಡೌಟ್ ಇದೆ. ಆದುದರಿಂದ ನಾಳೆ ಹೇಳುತ್ತೇನೆ. ನಾನೂ